

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 226 | Thursday 16-05-2024 | E-mail : maruti.b.hosamani76@gmail.com | Page: 4 | Price : Rs. 1/-


# ಕೊಟ್ಟೂರಿನಲ್ಲಿ ಬಾರಿ ಗಾಳಿ ಧೂಳು ಮಳೆ





**ಕೊಟ್ಟೂರು :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೊಟ್ಟೂರು ಪಟ್ಟಣದಲ್ಲಿ 15 ಮೇ 2024 ರಂದು 4 ಗಂಟೆಗೆ ಮಳೆ ಗಾಳಿ ಧೂಳಿನಿಂದ ಕೊಟ್ಟೂರು ಗೌರ್ಮೆಂಟ್ ಬಸ್ ಸ್ಟ್ಯಾಂಡ್ ಕೆರೆಯಂತಾಗಿದೆ.ಇದರ ಬಗ್ಗೆ ಒಂದು ವರ್ಷದ ಕೆಳಗೆ ನೂತನವಾಗಿ ಶಾಸಕರಾದಂತಹ ಕೆ ನೇಮಿರಾಜ್ ನಾಯಕ್ ರವರನ್ನು ಪ್ರಶ್ನೆ ಮಾಡಿದರೆ ಅವರೇ ಹೌದು ಈ ಈ ಬಸ್ ಸ್ಟ್ಯಾಂಡ್ ಮಳೆ ನೀರಿನಿಂದ ಕೆರೆಯಂತಾಗಿದೆ ಎಂದು ಇಂದಿನ ಶಾಸಕರನ್ನು ಆಡಿ ಕೊಂಡಿದ್ದರು ಆದರೆ ಇನ್ನು ಮುಂದೆ ನನ್ನ ಕೆಲಸ ಮಾಡುತ್ತೇನೆ ನಾನು ಒಳ್ಳೆಯದನ್ನೇ ಕೆಲಸ ಕೈಗೊಳ್ಳುತ್ತೇನೆ ಎಂದು ಹೇಳಿ ವರ್ಷವಾದರೂ ಬಸ್ ಸ್ಟ್ಯಾಂಡು ಇಲ್ಲ ಆಸ್ಪತ್ರೆಯ ಅಭಿವೃದ್ಧಿ ಇಲ್ಲ ಎಂದು ಸಾರ್ವಜನಿಕರು ಪಟ್ಟಣದಲ್ಲಿ "ಪಿಸು" ಗುಟ್ಟುವರಂತೆ ಹಾಗೇನೆ ನಾಮ ಮಾತ್ರಕ್ಕೆ ಶಾಸಕರಾಗಿ ಕೊಟ್ಟೂರಿನಲ್ಲಿ ಆರಿಸಿ ಬರುತ್ತಾರೆ ಬಂದವರು ಯಾವುದೇ ಅಭಿವೃದ್ಧಿ ಕಾಣದಂತೆ ಕೊಟ್ಟೂರಿನ ಸಾರ್ವಜನಿಕರು ಕಷ್ಟ ನೋವುಗಳನ್ನು ಕೇಳುವರೇ ಇಲ್ಲ ಎಂದು ಜನರು ತಮ್ಮಷ್ಟಕ್ಕೆ ತಾವೇ ಮಾತನಾಡಿ ಕೊಳ್ಳುತ್ತಾರೆ ಎಂದು ಕೆಲ ಸಂಘಟನಾ ಮುಖಂಡರು ನಮ್ಮ ಸುದ್ದಿ ವಾಹಿನಿ ಯೊಂದಿಗೆ ಮಾತನಾಡಿದರು ಮತ್ತು ಸಿಪಿಎಡ್ ಆವರಣದ ಪಕ್ಕದಲ್ಲಿರುವ ದೀಪಾ ರೆಸ್ಟೋರೆಂಟ್ ನಲ್ಲಿ ಮಳೆ ಗಾಳಿಯಿಂದ ಮರಗಳು ಬೈಕ್ ಆಟೋ ಮೇಲೆ ಬಿದ್ದಿವೆ ಮತ್ತು ಪೆಟ್ರೋಲ್ ಬಂಕ್ ನ ತಗಡುಗಳು ಬಿದ್ದಿವೆ ಒಟ್ಟಿನಲ್ಲಿ ಕೊಟ್ಟೂರಿನಲ್ಲಿ ಗಾಳಿ ಧೂಳಿನಿಂದ ಮುಂಗಾರಿನ ಮಳೆ ಬಂದಿರುವುದು ನೋಡಬಹುದು ಹೋಟೆಲ್ ಮಂಜಣ್ಣ ಹೇಳುವಂತೆ ನಾನು ಎಂದು ಕಂಡಿಲ್ಲ ಇಂತಹ ಗಾಳಿಯನ್ನು ನನ್ನ ಹೋಟೆಲ್ ನಲ್ಲಿರುವ ಕುರ್ಚಿಗಳು ಗಾಳಿಗೆ ಓಡಿದವು ತದನಂತರ ನಾನು ಅವುಗಳನ್ನು ತೆಗೆದು-ಕೊಂಡು ಬಂದು ಎಂದು ಕಾಣದ ಗಾಳಿ ಧೂಳನ್ನು ನಾನೆಂದು ಕಂಡೆ ಇಲ್ಲ ಎಂದು ಹೇಳಿದರು.

**ತಾಲೂಕ ವರದಿಗಾರರು ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್. ಕುಮಾರ್.ಸಿ. ಕೊಟ್ಟೂರು.**

# ಮುಚ್ಚದಿರುವ ಕೊಳವೆ ಬಾವಿಗೆ ಗ್ರಾಮ ಲೆಕ್ಕಿಗರು: ಪಿಡಿಓಗಳೇ ನೇರ ಹೊಣೆ



**ಇಂಡಿ :** ಇಂಡಿ ತಾಲೂಕಿನಾದ್ಯಂತ ರೈತರು ಹಾಗೂ ಸಾರ್ವಜನಿಕರು ಕೊಳವೆ (ಬೋರ್ ವೆಲ್) ಬಾವಿಗಳು ಮುಚ್ಚದೇ ಇದ್ದರೆ ಗ್ರಾಮ ಲೆಕ್ಕಿಗರು ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಡಂಗರು ಹೊಡೆದು ಅದನ್ನು ಮುಚ್ಚಿಸಬೇಕು. ಒಂದು ವೇಳೆ ಮುಚ್ಚದೆ ಇದ್ದರೆ ಗ್ರಾಮ ಲೆಕ್ಕಿಗರು ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನೇರ ಹೊಣೆಗಾರರು ಆಗುತ್ತಾ-ರೆ. ಅಂತವರ ವಿರುದ್ದ ಶಿಸ್ತು ಕಾನೂನು ಕ್ರಮ ಜರಗಿಸಲಾಗುವುದು ಎಂದು ಕಂದಾಯ ಉಪ ವಿಭಾಗಾಧಿಕಾರಿ ಅಬೀದ್ ಗದ್ಯಾಳ ಹೇಳಿದರು.

ಮಂಗಳವಾರ ಪಟ್ಟಣದ ಮಿನಿ ವಿಧಾನ ಸೌಧದ ತಹಸೀಲ್ದಾರ ಕಚೇರಿಯ ಸಭಾ ಭವನದಲ್ಲಿ ಪಿಡಿಓ, ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ತಾಲೂಕಾ ಮಟ್ಟದ ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಗೂ ನೋಡಲ್ ಅಧಿಕಾರಿಗಳ ಕುಡಿಯುವ ನೀರಿನ ಕುರಿತು ನಡೆದ ಟಾಸ್ಕ ಫೋರ್ಸ್ ಸಭೆಯಲ್ಲಿ ಅವರು ಮಾತನಾಡಿದರು.

ನಮ್ಮ ತಾಲೂಕಿನಲ್ಲಿ ಕೊಳವೆ ಬಾವಿಗಳ ಪ್ರಕರಣಗಳು ಮರುಕಳಿಸ ಬಾರದು. ಬೊರವೆಲ್ ಕೊರಿಯವರು ಕಡ್ಡಾಯವಾಗಿ ಗ್ರಾಪಂ ದಲ್ಲಿ ಎನ್.ಓ.ಸಿ ತೆಗೆದು ಕೊಳ್ಳಬೇಕು. ಒಂದು ವೇಳೆ ತೆಗೆದು ಕೊಳ್ಳದಿದ್ದರೆ ಅಂತವರ ವಿರುದ್ದ ಎಫ್. ಆರ್.ಆಯ್ ದಾಖಲಿಸಿ ಎಂದರು.

ನೀರಿನ ಕುರಿತು ತಾಲೂಕಾ ಮಟ್ಟದ ಅಧಿಕಾರಿಗಳು ವಾಚ್ ವಾರ್ಡ ಸರಿಯಾಗಿ ಕೆಲಸ ಮಾಡಬೇಕು ಎಂದರು.

ರೈತರು ನೀರನ್ನು ಕುಡಿಯಲಿಕ್ಕೆ ಮಾತ್ರ ಬಳಸಬೇಕು. ಕೃಷಿಗೆ ಉಪಯೋಗಿಸ ಬಾರದು ಒಂದು ವೇಳೆ ರೈತರು ಅಕ್ರಮವಾಗಿ ಕಾಲುವೆಗಳು ಅಗೆದರೆ ಅಂಥವರ ಮೇಲೆ ಕಾನೂನು ಕ್ರಮ ಜರುಗಿಸಭೆಕು ಎಂದರು.

ವೇದಿಕೆಯ ಮೇಲೆ ತಾಪಂ ಇ.ಓ ನೀಲಗಂಗಾ ಉಪಸ್ಥಿತರಿದ್ದರು.

ಹೆಸ್ಕಾ ಎ.ಇ.ಇ ಎಸ್.ಆರ್. ಮೆಂಡೆಗಾರ, ಸಹಾಯಕ ಕೃಷಿ ನಿರ್ದೇಶಕ ಮಹಾದೇವಪ್ಪ ಏವೂರ, ತೋಟಗಾರಿಕೆ ಸಹಾಯಕ ನಿರ್ದೇಶಕ ಎಚ್.ಎಸ್. ಪಾಟೀಲ, ಪಿಡಬ್ಲೂಡಿ ದಯಾನಂದ ಮಠ, ಸಿದ್ದರಾಮ ಮುಜಗೊಂಡ, ಬಿ.ಎಚ್. ಕನ್ನೂರ, ಪಿಡಿಓ ಗಳಾದ ಉಮೇಶ ಹೂಗಾರ, ಬಸವರಾಜ ಬಬಲಾದ, ಜಬ್ಬಾರ ಹಳ್ಳಿ, ಎಚ್. ಎಸ್. ಗುನ್ನಾಪುರ, ವೀಣಾ ಕೆ ಮತ್ತಿತರಿದ್ದರು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಶಿವಪ್ಪ. ಬಿ. ಹರಿಜನ. ಇಂಡಿ**

# ಉಪ್ಪಾರ ಸಮಾಜ ರಾಜಕೀಯ ವಂಚಿತ – ಸುರೇಶ ಕರೆಂಡೆ



**ಇಂಡಿ :** ಶೈಕ್ಷಣಿಕ, ಸಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅವಕಾಶ ವಂಚಿತದಿಂದ ಉಪ್ಪಾರ ಸಮಾಜ ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ ಎಂದು ಭಗೀರಥ ಮಹರ್ಷಿ ಸಮಾಜ ಸೇವಾ ಸಂಘದ ತಾಲ್ಲೂಕು ಅಧ್ಯಕ್ಷ ಸುರೇಶ ಕರಂಡೆ ಹೇಳಿದರು.

ಮಂಗಳವಾರ ಭಗೀರಥ ಮಹರ್ಷಿ ಜಯಂತಿ ಅಂಗವಾಗಿ ತಾಲ್ಲೂಕಿನ ಹಿರೇರೂಗಿ ಗ್ರಾಮ ಪಂಚಾಯತ, ಕೃಷಿ ಪತ್ತಿನ ಸಹಕಾರಿ ಸಂಘದ ಕಾರ್ಯಾಲಯದಲ್ಲಿ ಹಾಗೂ ಪಟ್ಟಣದ ವಿಜಯಪುರ ರಸ್ತೆಯಲ್ಲಿರುವ ಭಗೀರಥ ಮಹರ್ಷಿ ವೃತದಲ್ಲಿ ಭಗೀರಥ ಮಹರ್ಷಿ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.ಸ್ವಾತಂತ್ರ್ಯಪೂರ್ವದಲ್ಲಿಬ್ರಿಟಿಷರುಉಪ್ಪಿನ ಮೇಲೆ ತೆರಿಗೆ ಹೇರುವುದನ್ನು ತಡೆಯಲು ಉಪ್ಪಾರ ಜನಾಂಗ ಮಹಾತ್ಮಾ ಗಾಂಧೀಜಿಯೊಂದಿಗೆ ಗುಜರಾತಿನಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ತೊಡಗಿದ್ದರು. ಈ ಹೋರಾಟ ದೇಶವನ್ನು ಸ್ವತಂತ್ರ ಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಅದರಲ್ಲಿ ಉಪ್ಪಾರರ ಸೇವೆ ಸ್ಮರಣೀಯ ಎಂದರು.

ತಾಯಿ,ಉಪ್ಪಿನಋಣತೀರಿಸಲುಸಾಧ್ಯವಿಲ್ಲಎಂಬಂತೆಉಪ್ಪಿನ ಋಣ ಎಲ್ಲಾ ಸಮಾಜದ ಮೇಲಿದೆ. ಆದರೆ ಸದ್ಯ ಸಮಾಜಕ್ಕೆ ರಾಜಕೀಯ ಸ್ಥಾನಮಾನ ಸಿಗದೆಯಿರುವುದರಿಂದ ಪ್ರಗತಿ ಕಾಣದಂತಾಗಿದೆ. ಎಲ್ಲಿಯವರೆಗೆ ರಾಜಕೀಯ ಅವಕಾಶ ಸಿಗುವುದಿಲ್ಲವೋ..! ಅಲ್ಲಿಯವರೆಗೆ ಸಮಾಜ ತುಳಿತಕ್ಕೆ ಕಾರಣವಾಗುತ್ತದೆ. ಹಾಗಾಗಿ ಜನ ಪ್ರತಿನಿಧಿಗಳು ಹಾಗೂ ಸರಕಾರ ಈ ಸಮಾಜವನ್ನು ಗುರುತಿಸಿ ಮುಖ್ಯ ವಾಹಿನಿಗೆ ಬರಲು ರಾಜಕೀಯ ಕ್ಷೇತ್ರದಲ್ಲಿ ಅವಕಾಶ ಕೊಡಬೇಕು ಎಂದು ಮನವಿ ಮಾಡಿಕೊಂಡರು.

ಇನ್ನು ತಾ.ಪಂ ಮಾಜಿ ಉಪಾಧ್ಯಕ್ಷ ಸೋಮಶೇಖರ್ ಬ್ಯಾಳಿ, ರಮೇಶ್ ಕಲ್ಯಾಣಿ, ಡಾ. ಸಂಜೀವ ಮೊಟಗಿ ಮಾತನಾಡಿ, ಸಮಾಜ ಸುಧಾರಣೆಯಲ್ಲಿ ಯುವಕರ ಪಾತ್ರ ಪ್ರಮುಖ. ದುಶ್ಚಟಗಳಿಗೆ ದಾಸರಾಗದೆ ಇತರರಿಗೆ ಮಾದರಿಯಾಗಿ ಬದುಕಿ ಎಂದರು.

ಈ ಸಂದರ್ಭದಲ್ಲಿ ಅಂಬಿಕಾ ಮಳಸಿದ್ದ ಚನಗೊಂಡ, ಪರಶುರಾಮ ಹತ್ತರಕಿ, ಚಿದಾನಂದ ಉಪ್ಪಾರ, ಶಂಕರ ಪೂಜಾರಿ, ಸುರೇಶ ಡೊಂಗ್ರೊಜ್, ಗ್ರಾ.ಪಂ ಸದಸ್ಯ ಅನೀಲ ರೆಬಿನಾಳ, ಶೀವು ಉಪ್ಪಾರ, ಮಳ್ಳು ಗಬ್ಬೂರು, ಮಲ್ಲು ತೇರಿ, ರವಿ ಮಸಳಿ, ಅಣ್ಣರಾಯ ಮದರಿ, ಮಲ್ಲು ನಂದ್ಯಾಳ, ಜಕ್ಕಪ್ಪ ಉಪ್ಪಾರ, ಸದಾಶಿವ ನರಳೆ, ಕಲ್ಲಪ್ಪ ಕರಂಡೆ, ಜಟ್ಟಪ್ಪ ಉಪ್ಪಾರ, ನಿಂಗು ಬಿರಾದಾರ, ಸಂತೋಷದ ಅಗರಖೇಡ ಹಾಗೂ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಬೆಳೆ ಪರಿಹಾರ ಕುರಿತು ಮಾಹಿತಿಗಾಗಿ ಸಹಾಯವಾಣಿ ಪ್ರಾರಂಭ: ಜಿಲ್ಲಾಧಿಕಾರಿ ಆದೇಶ

**ತೇರದಾಳ :** ಬರ ಬೆಳೆ ಪರಿಹಾರ ಕುರಿತು ರೈತರಿಗೆ ಹೆಚ್ಚಿನ ಮಾಹಿತಿ ನೀಡಲು ಜಿಲ್ಲಾಧಿಕಾರಿಗಳು ಆಯಾ ತಾಲೂಕು ಕಚೇರಿಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಪ್ರಾರಂಭಿಸಿ ಆದೇಶ ಹೊರಡಿಸಿದೆ.

ಈಗಾಗಲೇ 2023ನೇ ಸಾಲಿನ ಮುಂಗಾರು ಹಂಗಾಲು ಬರ ಪರಸ್ಥಿತಿ ಹಿನ್ನಲೆಯಲ್ಲಿ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ರೈತರಿಗೆ ಬೆಳೆಹಾನಿ ಕುರಿತು ಮೊದಲ ಕಂತವಾಗಿ ಎಡರು ಸಾವಿರ ಹಣ ಬಿಡುಗಡೆ ಮಾಡಿದೆ. ಕೇಂದ್ರ ಸರಕಾರದ ಎನ್‌ಡಿಆರ್‌ಎಫ್ ಪ್ರಕಾರ ಹೆಚ್ಚುವರಿ ಬೆಳೆಹಾನಿ ಪರಿಹಾರವನ್ನು ಅರ್ಹತೆ ಹೊಂದಿರುವ ರೈತರಿಗೆ ಹೆಚ್ಚುವರಿ ಬೆಳೆಹಾನಿ ಪರಿಹಾರ ಬಿಡುಗಡೆ ಮಾಡಲಾಗುತ್ತಿದೆ. ಅದರಂತೆ ಜಿಲ್ಲೆಯಲ್ಲಿ ಬೆಳೆ ಸಮೀಕ್ಷೆ ದತ್ತಾಂಶದ ಮಾಹಿತಿ ಆಧಾರದ ಮೇಲೆ ಹಂತ ಹಂತವಾಗಿ ಪರಿಹಾರ ಹಣ ಪಾವತಿಸಲಾಗುತ್ತಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ರೈತರು ಈ ಕೆಳಗೆ ಸೂಚಿಸಿದ ದೂರವಾಣಿ ನಂಬರಗಳಿಗೆ ಸಂಪರ್ಕಿಸಬಹುದಾಗಿದೆ.

ಜಿಲ್ಲಾಧಿಕಾರಿಗಳ ಕಚೇರಿ(08354-236240 ಅಥವಾ ಟೋಲ್ ಫ್ರೀ 1077), ಉಪವಿಭಾಗಾಧಿಕಾರಿಗಳ ಕಾರ್ಯಾಲಯ ಬಾಗಲಕೋಟೆ (08354-235374), ಜಮಖಂಡಿ ಉಪವಿಭಾಗಾಧಿಕಾರಿಗಳ ಕಾರ್ಯಾಲಯ(08353-220023), ಜಂಟಿ ನಿರ್ದೇಶಕ ಕಾರ್ಯಾಲಯ ಕೃಷಿ ಇಲಾಖೆ ಬಾಗಲಕೋಟೆ(08354-297956), ಉಪನಿರ್ದೇಶಕರ ಕಚೇರಿ, ತೋಟಗಾರಿಕೆಇಲಾಖೆ ಬಾಗಲಕೋಟೆ(9380964234), ತಹಸೀಲ್ದಾರ್ ಕಚೇರಿ ಬಾಗಲಕೋಟೆ(08354-235374), ತಹಸೀಲ್ದಾರ್ ಕಚೇರಿ ಬಾದಾಮಿ(08357-200238), ತಹಸೀಲ್ದಾರ್ ಕಚೇರಿ ಗುಳೇದಗುಡ್ಡ(08357-250140), ತಹಸೀಲ್ದಾರ್ ಕಚೇರಿ ಹುನುಗುಂದ (08351-200212), ಇಳಕಲ್ಲ(08351-271100), ತಹಸೀಲ್ದಾರ್ ಕಚೇರಿ ಜಮಖಂಡಿ (08353-220023), ತಹಸೀಲ್ದಾರ್ ಕಚೇರಿ ಮುಧೋಳ(08350-280051), ತಹಸೀಲ್ದಾರ್ ಕಚೇರಿ ರಬಕವಿ-ಬನಹಟ್ಟಿ(08353-230555), ತಹಸೀಲ್ದಾರ್ ಕಚೇರಿ ಬೀಳಗಿ(08425-275227) ಸಂಪರ್ಕಿಸುವಂತೆ ಜಿಲ್ಲಾಧಿಕಾರಿಗಳು ಮೇ. 8ರಂದು ಆದೇಶ ಹೊರಡಿಸಿದ್ದಾರೆ.

# ಮಕ್ಕಳ ಮತ್ತು ತಾಯಂದಿರ ಆರೋಗ್ಯದ ಮೇಲೆ "ಹವಾಮಾನ ವೈಪರಿತ್ಯದ ಪರಿಹಾರ ಪ್ರಾಮುಖ್ಯತೆಯಲ್ಲಿ"





**ಬಾಗಲಕೋಟೆ :** ಶ್ರೀ ಬಿ.ವಿ.ವಿ.ಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ: 08/05/2024 ರಂದು ಅಂತರಾಷ್ಟ್ರೀಯ ಶುಶ್ರೂಷಕಿಯರ ದಿನಾಚರಣೆಯನ್ನು ಶ್ರೀ ಬಿ.ವಿ.ವಿ.ಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಯಿತು. ಮಕ್ಕಳ ಮತ್ತು ತಾಯಂದಿರ ಆರೋಗ್ಯದ ಮೇಲೆ "ಹವಾಮಾನ ವೈಪರಿತ್ಯದ ಪರಿಹಾರ ಪ್ರಾಮುಖ್ಯತೆಯಲ್ಲಿ" ಎಂಬ ಶೀರ್ಷಿಕೆಯ ಅಡಿಯಲ್ಲಿ ಶುಶ್ರೂಷಕಿಯರ ಪಾತ್ರ ತಾಯಿ ಮತ್ತು ಮಗುವಿನ ಸಂರಕ್ಷಣೆಯ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಬಿ.ವಿ.ವಿ.ಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀಮತಿ ಜಯಶ್ರೀ ಇಟ್ಟಿ ಅವರು ಈಗಿನ ಹವಾಮಾನ ವೈಪರಿತ್ಯದ ಪರಿಹಾರ ಮತ್ತು ಪ್ರಸವ ಸಮಯದಲ್ಲಿ ತಾಯಂದಿರು ಮಗುವಿನಕಾಳಜಿತೆಗೆದುಕೊಳ್ಳುವ ಮತ್ತು ಆಹಾರದ ಕುರಿತು ಸವಿಸ್ತಾರವಾಗಿ ಮಾತನಾಡಿದರು. ಶ್ರೀ ಬಿ.ವಿ.ವಿ.ಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಶ್ರೀಮತಿ ಶರಣಮ್ಮ ಬಂಟನೂರ ಅವರು ಹವಾಮಾನ ವೈಪರಿತ್ಯದ ಪರಿಹಾರ ಕುರಿತು ವಿವರಿಸಿದರು. ತೃತೀಯ ವರ್ಷದ ಡಿಪ್ಲೋಮಾ ನರ್ಸಿಂಗ್ ವಿದ್ಯಾರ್ಥಿಗಳು ಕಿರು ನಾಟಕದ ಮೂಲಕ ಹವಾಮಾನ ವೈಪರಿತ್ಯದ ಪರಿಹಾರದ ಪ್ರಾಮುಖ್ಯತೆ ಬಗ್ಗೆ ಶುಶ್ರೂಷಕಿಯರ ಪಾತ್ರದ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ನರ್ಸಿಂಗ್ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು, ಹಾಗೂ ತೃತೀಯ ವರ್ಷದ ಡಿಪ್ಲೋಮಾ ನರ್ಸಿಂಗ್ ವಿದ್ಯಾರ್ಥಿನಿಯರಾದ ಅನುಷಾ ವಾಡಿ ಇವರು ಸ್ವಾಗತಿಸಿ ಸಿರೀನ್ ಹಂಚಿನಮನಿ ಇವರಿಂದ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳಿ ಸಲಾಯಿತು.

# ಕಲ್ಲೋಳಿಯ ಬಸವೇಶ್ವರ ಸೊಸಾಯಿಟಿಗೆ 3.88 ಕೋಟಿ ಲಾಭ



**ಮೂಡಲಗಿ :** ಸಮೀಪದ ಕಲ್ಲೋಳಿಯ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘವು ಮಾರ್ಚ ಅಂತ್ಯಕ್ಕೆ 3.88 ಕೋಟಿ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಬಾಳಪ್ಪ ಬಸಪ್ಪ ಬೆಳಕೂಡ ತಿಳಿಸಿದ್ದಾರೆ

ಗುರುವಾರ ಸಂಘದ ಕಛೇರಿಯ ಸಭಾಭವನದಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಸದಸ್ಯರ ಸಂಖ್ಯೆ: 4326 ಸದಸ್ಯರು ಶೇರು ಬಂಡವಾಳ: ರೂ.78.91 ಲಕ್ಷಠೇವುಗಳು ರೂ.57.88 ಕೋಟಿಸಾಲಗಳು ರೂ. 65.39 ಕೋಟಿನಿಧಿಗಳು ರೂ. 19.63 ಕೋಟಿಗುಂತಾವಣಿಗಳು ರೂ. 11.55 ಕೊಟಿದುಡಿಯುವ ಬಂಡವಾಳ ರೂ. 78.30 ಕೋಟಿ,33 ವರ್ಷಗಳಿಂದ 100% ಸಾಲ ವಸೂಲಾತಿ ದಾಖಲೆ ಮಾಡಿ ಮಾರ್ಚ ಅಂತ್ಯಕ್ಕೆ 3.88 ಕೋಟಿ ಲಾಭ ಗಳಿಸಿದೆ ಎಂದರು

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿರುವ ಸಂಘಗಳಲ್ಲಿ ಸಣ್ಣ ಪ್ರಮಾಣದ ವ್ಯವಹಾರದಲ್ಲಿ ರಾಜ್ಯದಲ್ಲಿಯೇ ಹೆಚ್ಚು ಲಾಭಗಳಿಸಿದ ಶ್ರೇಣಿಯಲ್ಲಿರುವ ಸಂಸ್ಥೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಉಪಾಧ್ಯಕ್ಷ ಶಿವರುದ್ರಪ್ಪ ಬಾ. ಬಿ॥ ಪಾಟೀಲ ಹೇಳಿದರು

ಪತ್ರಿಕಾ ಗೋಷ್ಠಿಯಲ್ಲಿ ನಿದೇರ್ಶಕರಾದ ಬಸಗೌಡ ಶಿ. ಪಾಟೀಲ ಬಸವಣ್ಣೆಪ್ಪ ಶೆ. ಗೋರೋಶಿ ಮಲ್ಲಪ್ಪ ಬಾ. ಖಾನಾಪೂರ ರಾಮಪ್ಪ ಭೀ. ದಬಾಡಿಹನಮಂತ ದುಂ. ಪರಕನಟ್ಟಿ ಸುಭಾಸ ಮ. ಖಾನಾಪೂರ,ಬಸಪ್ಪ ಶಿ. ಹೆಬ್ಬಾಳ, ದುಂಡವ್ವ ಭೀ. ಕಡಾಡಿ,ಲಕ್ಷ್ಮೀಬಾಯಿಮ.ಕಂಕಣವಾಡಿ,ಪ್ರಕಾಶಮಾ. ಕಲಾಲ, ಮಹಮ್ಮದಶೇಫಿದ.ಮೋಕಾಶಿ, ಕಲ್ಲೋಳೆಪ್ಪ ಹ.ತೆಳಗಡೆ, ಪ್ರಧಾನ ವ್ಯವಸ್ಥಾಪಕ ಹಣಮಂತ ಸ. ಖಾನಗೌಡ್ರ, ಹಾಗೂ ಸಂಘದ ಸರ್ವ ಸದಸ್ಯರು, ಸಂಘದ ಸರ್ವ ಸಿಬ್ಬಂದಿ ವರ್ಗ ಇದ್ದರು.

# ಪ್ರಗತಿಯನ್ನು ಅಳವಡಿಸಿಕೊಳ್ಳುವ ಜೀವನವನ್ನು ಸಶಕ್ತಗೊಳಿಸುವುದು: ಎಲ್ಲರಿಗೂ ಸಮಾನ ಮತ್ತು ಮೌಲ್ಯಮಾಪನ ಮಾಡಬಹುದಾದ ಥಲಸ್ಸೆಮಿಯಾ ಚಿಕಿತ್ಸೆ




**ಬಾಗಲಕೋಟೆ :** ನಗರದ ಪ್ರತಿಷ್ಠಿತ ಶ್ರೀ ಬ.ವಿ.ವ ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಚಿಕ್ಕಮಕ್ಕಳ ಶುಶ್ರೂಷಾ ವಿಭಾಗದ ವತಿಯಿಂದ ದಿನಾಂಕ 09/05/2024 ರಂದು ಸಜ್ಜಲಶ್ರೀ ನರ್ಸಿಂಗ್ ಕಾಲೇಜಿನ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಥಲಸ್ಸೆಮಿಯಾ ದಿನವನ್ನು ಆಚರಿಸಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ.ವಿ.ವ ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯ ಪ್ರಾಚಾರ್ಯರಾದ ಡಾ॥ ದೀಲಿಪ್ ಎಸ್. ನಾಟೇಕಾರ ಅವರು ವಹಿಸಿ, ಪ್ರತಿವರ್ಷಕ್ಕೆ 10 ರಿಂದ 15 ಸಾವಿರ ಮಕ್ಕಳು ಥಲಸ್ಸೆಮಿಯಾ ರೋಗದಿಂದ ಭಾರತದಲ್ಲಿ ಜನಿಸುತ್ತಾರೆ ಹಾಗೂ ಪ್ರತಿ 10000 ದಲ್ಲಿ 4 ಮಕ್ಕಳು ಥಲಸ್ಸೆಮಿಯಾ ರೋಗದಿಂದ ಬಳುತ್ತಿದ್ದಾರೆ. ಭಾರತ ಒಂದರಲ್ಲಿಯೇ ಜಗತ್ತಿನ ಶೇ 25 ರಷ್ಟು ಮಕ್ಕಳು ಥಲಸ್ಸೆಮಿಯಾ ರೋಗ ಪೀಡಿತರಾಗಿದ್ದಾರೆ ಎಂದು ತಿಳಿಸಿದರು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಬಿವಿವಿಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೋ. ಜಯಶ್ರೀ ಇಟ್ಟಿ ಇವರು ಥಲಸ್ಸೆಮಿಯಾ ರೋಗದ ಹರಡುವಿಕೆ, ಮುನ್ನೆಚ್ಚರಿಕೆ ಕ್ರಮಗಳು ಹಾಗೂ ಅನುವಂಶಿಕವಾಗಿ ಖಾಯಿಲೆ ಹರಡುವುದೆಂದು ಮಾಹಿತಿ ನೀಡಿದರು ಅಲ್ಲದೇ ಕಾರ್ಯಕ್ರಮಕ್ಕೆ ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಡಾ॥ ಅರುಣ ಕಟ್ಟಿ, ವೈದ್ಯರು, ಚಿಕ್ಕಮಕ್ಕಳ ವಿಭಾಗ, ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ, ಬಾಗಲಕೋಟ ಇವರು ಥಲಸ್ಸೆಮಿಯಾ ರೋಗವು ರಕ್ತಕ್ಕೆ ಸಂಬಂಧಿಸಿದ ಒಂದು ಅನುವಂಶಿಕವಾಗಿ ತಂದೆ-ತಾಯಿಯಿಂದ ಮಕ್ಕಳಿಗೆ ಬರುವ ಕಾಯಿಲೆಯಾಗಿದೆ ಕೆಂಪುರಕ್ತಕಣಗಳು ಕಡಿಮೆಯಾಗಿ ರಕ್ತಹೀನತೆ ಉಂಟಾಗುವುದು, ಆಮ್ಲಜನಕವನ್ನು ಸಾಗಿಸುವ ಪ್ರೋಟಿನ್ ಹಿಮೋಗ್ಲೋಬಿನ್ ಮಟ್ಟವನ್ನು ಕಡಿಮೆ ಮಾಡುತ್ತದೆ ಹಾಗೂ ಸುಧಾರಿತ ಚಿಕಿತ್ಸೆ ಮತ್ತು ಆರೈಕೆಯ ಆಯ್ಕೆಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

ಮಹಾವಿದ್ಯಾಲಯದ ಚಿಕ್ಕಮಕ್ಕಳ ಶುಶ್ರೂಷಾ ವಿಭಾಗದ ಪ್ರಾಧ್ಯಾಪಕರಾದ ಡಾ॥ ನಿಂಗನಗೌಡ ಜಿ. ಪಾಟೀಲ ಇವರು ಥಲಸ್ಸೇಮಿಯಾ ದಿನದ ಶೀರ್ಷಿಕೆ ಕುರಿತಂತೆ ಮಾತನಾಡಿದರು.

ಮಹಾವಿದ್ಯಾಲಯದ ಚಿಕ್ಕಮಕ್ಕಳ ಶುಶ್ರೂಷಾ ವಿಭಾಗದ ವತಿಯಿಂದ ವಿಭಾಗದ ಮುಖ್ಯಸ್ಥರಾದ ಡಾ॥ ದಾನೇಶ್ವರಿ ಹಿರೇಮಠ, ಪ್ರಾಧ್ಯಾಪಕರಾದ ಡಾ॥ ಪ್ರಶಾಂತ ಕುಲಕರ್ಣಿ, ಸಂತೋಷ ಸಜ್ಜನ, ಸಹಪ್ರಾಧ್ಯಾಪಕರು, ಕುಮಾರಿ. ಚಂದ್ರಾ ಜತ್, ಕುಮಾರಿ ರೇಣುಕಾ ಜಾಲಿಹಾಳ ಹಾಗೂ ಶ್ರೀಮತಿ. ಶ್ರೀದೇವಿ ತೇಲಿ ಇವರುಗಳು ಸದರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಮಕ್ಕಳೊಂದಿಗೆ ಚರ್ಚಾಕೂಟ ನಡೆಸಿದರು. ಅಲ್ಲದೇ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಬೋಧಕ ಮತ್ತು ಬೋಧಕತೇರ ಸಿಬ್ಬಂದಿಯವರು ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಎರಡನೇ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಾದ ಕುಮಾರ. ಸಚಿನ ನಿರೂಪಿಸಿದರು. ಮಹಾಂತೇಶಗೌಡ ಸ್ವಾಗತಿಸಿದರು. ಕುಮಾರ. ಬಸವರಾಜ ವಂದಿಸಿದರು ಹಾಗೂ ಇನ್ನೂಳಿದ ಸ್ನಾತಕೋತ್ತರ ಮೊದಲನೇ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಈ ಒಂದು ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು, ಬಿ.ಎಸ್ಸಿ. ನರ್ಸಿಂಗ್ 3ನೇ ವರ್ಷದ ವಿದ್ಯಾರ್ಥಿಗಳು, ಮೊದಲನೇ ವರ್ಷದ ಪಿ.ಬಿ.ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳು ಸೇರಿದಂತೆ ಸು. 300 ಕ್ಕೂ ಅಧಿಕ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು.

# ಶಿರೋಳದ ಶ್ರೀ ಯಚ್ಚರಸ್ವಾಮಿ ಮಠದ ಉಪನಯನದ ಅದ್ಭುತಗಳಿಗೆ






ಹತ್ತು ಹಲವಾರು ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಶಿರೋಳದ ಶ್ರೀ ಯಚ್ಚರಸ್ವಾಮಿಮಠವು ಇತ್ತೀಚಿಗೆ ಅಪರೂಪದ ಉಪನಯನದ ಗಳಿಗೆಗೆ ಕಾರಣವಾಗಿದೆ. ಸುಮಾರು 33 ವಟುಗಳಿಗೆ ಉಪನಯನ ಕಾರ್ಯವನ್ನು ಮಾಡುವ ಮೂಲಕ ಶಿರೋಳದ ಧಾರ್ಮಿಕತೆಗೆ ಹೊಸ ಮುನ್ನುಡಿಯನ್ನು ಬರೆಯಿತು. ಮಠದ ಪೀಠಾಧಿಪತಿಗಳು ಹಾಗೂ ಸ್ಥಳೀಯ ಭಕ್ತರೆಲ್ಲರ ಸಹಕಾರದಿಂದ ಈ ರೀತಿಯಾದ ಧಾರ್ಮಿಕ ಕ್ರೀಯಾವಿವಧಿಗಳು ನಿರಂತರವಾಗಿ ನಡೆಯುತ್ತಿರುವುದು ಶ್ರೀ ಯಚ್ಚರಸ್ವಾಮಿ ಮಠದ ವಿಶೇಷತೆಯಾಗಿದೆ.

ಉಪನಯನವು ಉಪಕ್ರಮಣ ಕ್ರಿಯಾವಿಧಿ ಮತ್ತು ಇದರ ಮೂಲಕ ಆಧ್ಯಾತ್ಮಿಕ ಜ್ಞಾನದ ವರ್ಗಾವಣೆಯನ್ನು ಸಂಕೇತಿಸಲು ಉಪಕ್ರಮಿಸುವವರಿಗೆ ಒಂದು ಪವಿತ್ರ ದಾರವನ್ನು ತೊಡಿಸಲಾಗುತ್ತದೆ. ಹಿಂದೂ ಧರ್ಮದಲ್ಲಿ, ಯಜ್ಞೋಪವೀತ(ಜನಿವಾರವು ಒಬ್ಬರಿಗೆ ಸಂಧ್ಯಾವಂದನೆ ಮತ್ತು ಗಾಯತ್ರಿ ಮಂತ್ರ ಮಾಡಲು ಕೊಟ್ಟ ಅನುಮತಿಯನ್ನು ಸಂಕೇತಿಸಲು ತೊಟ್ಟಿಕೊಳ್ಳಲಾದ ಪ್ರತ್ಯೇಕ ಹತ್ತಿಯ ಎಳೆಗಳಿಂದ ರಚಿತವಾದ ಒಂದು ತೆಳುವಾದ ಪವಿತ್ರೀಕರಿಸಿದ ಹುರಿ. ಧರಿಸುವವನಿಗೆ ಪವಿತ್ರಯಜ್ಞೋಪವೀತವನ್ನು ತೊಡಿಸುವ ಉಪನಯನ ಸಮಾರಂಭವನ್ನು ಹಲವುವೇಳೆ ಒಂದು ಸಾಮಾಜಿಕವಾಗಿ ಹಾಗು ಆಧ್ಯಾತ್ಮಿಕವಾಗಿ ಮಹತ್ವದ ವಿಧಿಯೆಂದು (ಸಂಸ್ಕಾರ) ಪರಿಗಣಿಸಲಾಗುತ್ತದೆ.

ಉಪನಯನವೆಂದರೆ ಆಚಾರ್ಯರ ಸಮೀಪಕ್ಕೆ ಉಪದೇಶಕ್ಕಾಗಿ ಆಗಮಿಸುವುದು (ಇನಿಷಿಯೇಷನ್). ಇದರಲ್ಲಿ ಮುಖ್ಯವಾದುದು ಗಾಯತ್ರಿ ಮಂತ್ರೋಪದೇಶ ಮತ್ತು ಬ್ರಹ್ಮಚರ್ಯವ್ರತ ದೀಕ್ಷೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರೆಂಬ ತ್ರಿವರ್ಣದವರಿಗೆ ಮಾತ್ರ ಈ ಸಂಸ್ಕಾರವುಂಟು. ವಟುವಿನ ವಯಸ್ಸನ್ನು ಮೂರು ವರ್ಣದವರಿಗೂ ಪ್ರತ್ಯೇಕವಾಗಿ ನಿಬಂಧಿಸಲಾಗಿದೆ. ಅವರ ಉಡುಗೆ ತೊಡುಗೆಯಲ್ಲೂ ವ್ಯತ್ಯಾಸವುಂಟು. ಈ ಸಂಸ್ಕಾರದಲ್ಲಿ ವಟುವಿಗೆ ಯಜ್ಞೋಪವೀತಧಾರಣೆ ಮಾಡಿಸಲಾಗುತ್ತದೆ. ಅನಂತರ ಬ್ರಹ್ಮಚಾರಿಯಾಗಿ ಆತ ಧರ್ಮವನ್ನು ಪಾಲಿಸಬೇಕು, ಭಿಕ್ಷೆಯಿಂದ ಜೀವಿಸಬೇಕು. ತ್ರಿಸಂಧ್ಯಾಕಾಲಗಳಲ್ಲಿ ಗಾಯತ್ರಿ ಮಂತ್ರಪೂರ್ವಕ ಸಂಧ್ಯಾವಂದನೆಯುನ್ನಾಚರಿಸಬೇಕು. ಅರ್ಘ್ಯನ್ನು ಕೊಡಬೇಕು. ವೇದಾಧ್ಯಯನವೇ ವಟುವಿನ ಪ್ರಥಮ ಕರ್ತವ್ಯ. ಗುರುಕುಲವಾಸ, ಗುರುಶುಶ್ರೂಷೆ, ಗುರುಪತ್ನಿಯಲ್ಲಿ ಭಕ್ತಿ– ಇವುಗಳನ್ನು ವಿಧಿಸಲಾಗಿದೆ. ವಿದ್ಯಾಭ್ಯಾಸಕ್ಕೆ ಕಾಲಾವಧಿಯನ್ನು ಗೊತ್ತು ಮಾಡಿದಂತೆ ತೋರುವುದಿಲ್ಲ. ಭಾರದ್ವಾಜರು 75 ವರ್ಷ ಬ್ರಹ್ಮಚಾರಿಗಳಾಗಿದ್ದರೂ ವೇದಗಳ ಅಧ್ಯಯನವನ್ನು ಅಲ್ಪ ಪ್ರಮಾಣದಲ್ಲಿ ಮಾತ್ರ ಮುಗಿಸಿದ್ದರಂತೆ. ಪ್ರಾಚೀನ ಕಾಲದಲ್ಲಿ ತಂದೆಯೇ ಗಾಯತ್ರೀ ಮಂತ್ರೋಪದೇಶ ಮಾಡುತ್ತಿದ್ದಿರಬಹುದೆಂಬ ಅಭಿಪ್ರಾಯವಿದೆ. ತೈತ್ತಿರೀಯ ಸಂಹಿತೆ, ಬ್ರಾಹ್ಮಣಗಳ ಕಾಲಕ್ಕೆ ವಟುವನ್ನು ಗುರುಕುಲವಾಸಕ್ಕೆ ಕಳುಹಿಸುವ ಸಂಪ್ರದಾಯ ಬಂದಿರಬಹುದು. ಉದ್ದಾಲಕ ಆರುಣಿ ತಾನೇ ಬ್ರಹ್ಮ ವಿದ್ಯಾಪಾರಂಗತನಾಗಿದ್ದರೂ ತನ್ನ ಪುತ್ರ ಶ್ವೇತಕೇತುವನ್ನು ಮತ್ತೊಬ್ಬ ಗುರುವಿನಲ್ಲಿಗೆ ಕಳುಹಿಸಿಕೊಟ್ಟ ಕಥೆ ಇದೆ. ಉಪನಯನ ಸಂಸ್ಕಾರದ ವೇಳೆ ತುಳು ಶಿವಳ್ಳಿ ಬ್ರಾಹ್ಮಣ ವಟು.ತೆಳುವಾದ ಹಳದಿ ಬಣ್ಣದ ಯಜ್ಞೋಪವೀತ,ಸೊಂಟದಲ್ಲಿ ದರ್ಭೆಯ ದಾರ ಮತ್ತು ಕೈಯಲ್ಲಿ ಅಶ್ವತ್ಥಮರದ ರೆಂಬೆಯ ಕೋಲುಗಳನ್ನು ಗಮನಿಸಿ.ಇದು ಅವನು ಬ್ರಹ್ಮಚರ್ಯಕ್ಕೆ ಕಾಲಿಟ್ಟುದುದನ್ನು ಸಂಕೇತಿಸುತ್ತದೆ.

ಉಪನಯನ ಸಂಸ್ಕಾರವನ್ನು ಆಪಸ್ತಂಬ ಗೃಹ್ಯ ಸೂತ್ರದಲ್ಲಿ ವಿವರವಾಗಿ ಹೇಳಿದೆ. ಧರ್ಮಸೂತ್ರಗಳ ಆಧಾರದ ಮೇಲೆ ಸ್ಮೃತಿಚಂದ್ರಿಕೆಯಲ್ಲಿ ಸ್ತ್ರೀಯರಿಗೂ ಉಪನಯನವಿತ್ತೆಂದು ಹೇಳಲಾಗಿದೆ. ಉಪನಯನಕ್ಕೂ ಮುಂಚೆ ಅಕ್ಷರಾಭ್ಯಾಸದೊಂದಿಗೆ ವಿದ್ಯಾರಂಭ ಸಂಸ್ಕಾರ ನಡೆದಿರಬೇಕು. ಉಪನಯನದಿಂದ ಪ್ರೌಢ ವಿದ್ಯಾಭ್ಯಾಸವನ್ನು ಪ್ರಾರಂಭಿಸಲಾಗುತ್ತದೆ. ಇತರ ಸಂಸ್ಕೃತಿಗಳಲ್ಲೂ ಉಪನಯನದಂತೆಯೇ ದೀಕ್ಷಾಪದ್ಧತಿ ಇದೆ. ಸಾಮಾಜಿಕವಾಗಿ ತನ್ನ ಕರ್ತವ್ಯಗಳನ್ನು ಅರಿಯಬೇಕಾದ ಆವಶ್ಯಕತೆಯನ್ನು ವಿದ್ಯಾರ್ಥಿಗೆ ಆಗ ತಿಳಿಸಲಾಗುತ್ತದೆ. ಉಪನಯನದ ಅನಂತರ ಅತಿ ಕಠಿಣವಾದ ಶಿಕ್ಷಣವನ್ನು ಕೊಡಲಾಗುವುದು. ಸಾಮಾಜಿಕ ಜೀವನ ಸುಗಮವಾಗುವುದಕ್ಕೆ ವಿದ್ಯಾಭ್ಯಾಸ ಕ್ರಮ ಎಷ್ಟು ಮಹತ್ತರವಾಗಿರಬೇಕೆಂಬುದನ್ನು ಭಾರತೀಯರು ಚೆನ್ನಾಗಿ ಅರಿತಿದ್ದರು. ಮಾನವಜೀವನ, ಪ್ರಾಣಿಜೀವನದ ಮಟ್ಟಕ್ಕೆ ಇಳಿಯದಿರಬೇಕಾದರೆ ಮಾನವನ ಬೌದ್ಧಿಕ ಬೆಳೆವಣಿಗೆಯೇ ಕಾರಣ. ಮಾನಸಿಕ ಶಿಕ್ಷಣದೊಂದಿಗೆ ಆತ್ಮಬಲ ಮತ್ತು ದೈಹಿಕಬಲಗಳ ಶಿಕ್ಷಣಕ್ಕೂ ಅಷ್ಟೇ ಗಮನಕೊಟ್ಟು ಗುರು ವಿದ್ಯಾರ್ಥಿಯನ್ನು ತರಬೇತು ಮಾಡಬೇಕು. ಇದಕ್ಕಾಗಿ ಗುರುವಿನ ಲಕ್ಷಣಗಳು ಹೇಗಿರಬೇಕೆಂಬ ನಿಬಂಧನೆಗಳನ್ನೂ ಉಪನಯನ ಸಂಸ್ಕಾರದಲ್ಲಿ ತಿಳಿಸಲಾಗಿದೆ. ತನ್ನ ಮಹತ್ತರವಾದ ಹೊಣೆಯನ್ನು ಉಪಾಧ್ಯಾಯ ನಿರ್ವಹಿಸಲೇಬೇಕು. ಉಪನಯನದಿಂದ ಎರಡನೆಯ ಜನ್ಮ ಪ್ರಾಪ್ತವಾಗುವುದೆಂಬ, ಅಂದರೆ ಬಾಲಕ ದ್ವಿಜನಾಗುವನೆಂಬ ಅಭಿಪ್ರಾಯವಿದೆ. ಶಿಷ್ಯನ ಶೀಲವನ್ನು ರೂಪಿಸುವ ಗುರು ಶೀಲವಂತನಾಗಿರಬೇಕು; ಶಿಷ್ಯನ ಮೇಲೆ ಪ್ರಭಾವ ಬೀರುವಷ್ಟು ಯೋಗ್ಯನಾಗಿರಬೇಕು. ಬ್ರಾಹ್ಮಣನಿಗೆ ವಸಂತ ಋತುವಿನಲ್ಲೂ ಕ್ಷತ್ರಿಯನಿಗೆ ಗ್ರೀಷ್ಮ ಋತುವಿನಲ್ಲೂ ವೈಶ್ಯನಿಗೆ ವರ್ಷ ಋತುವಿನಲ್ಲೂ ಅವರ ಸಾತ್ವಿಕ, ರಾಜಸ ಗುಣಗಳಿಗನುಸಾರವಾಗಿ ಉಪನಯನವನ್ನು ಮಾಡಬೇಕೆಂದು ನಿಯಮವಿದೆ. ಬ್ರಾಹ್ಮಣರು ಶಮದಮಗಳಿಂದ ತೇಜೋವಂತನಾಗಿ ಬಾಳಬೇಕೆಂಬುದು ಒಟ್ಟು ಅಭಿಪ್ರಾಯ.

* * *

**ಚಿತ್ರಲೇಖನ**
**ಚಿದಂಬರ ಪಿ. ನಿಂಬರಗಿ**
**ಶಿರೋಳ, ಧಾರವಾಡ**

## ಕಾಂಬಳೆ ಕುಟುಂಬದಿಂದ ಮತದಾನ



**ಧಾರವಾಡ :** ರಾಜ್ಯದ ಎರಡನೇ ಹಂತದಲ್ಲಿ ಉತ್ತರ ಭಾಗದ 14 ಲೋಕಸಭೆ ಕ್ಷೇತ್ರಗಳಿಗೆ ದಿನಾಂಕ: 07–05–2024ರಂದು ಮತದಾನ ನಡೆಯಿತು. ಧಾರವಾಡ ಲೋಕಸಭಾ ಕ್ಷೇತ್ರದ ಮತದಾನದಲ್ಲಿ ಧಾರವಾಡದ ಭಾರತಿನಗರ ಮತಗಟ್ಟೆಯಲ್ಲಿ ಕಾಂಬಳೆ ಕುಟುಂಬದವರು ಮತದಾನ ಮಾಡಿದರು. ಮತದಾನದಲ್ಲಿ ಕೆಂಚಪ್ಪ ಕಾಂಬಳೆ, ಶಿವರಾಜ ಕಾಂಬಳೆ, ದೇವರಾಜ ಕಾಂಬಳೆ, ಶಶಿಕಲಾ ಕಾಂಬಳೆ, ಜ್ಯೋತಿ ಕಾಂಬಳೆ, ವಜ್ರೇಶ ಕಾಂಬಳೆ, ವಿಣೇಶ ಕಾಂಬಳೆ ಮುಂತಾದವರು ಮತದಾನ ಮಾಡಿ, ಮತದಾನದ ಹಕ್ಕು ಚಲಾಯಿಸಿದರು.

### ದೀಪಾ ರಾಜ್ಯಕ್ಕೆ 7ನೇ ರ್‍ಯಾಂಕ್ । ಎರಡು ವಿಭಾಗದಲ್ಲಿ ಉತ್ತಮ ಸಾಧನೆ

## ಹುಲ್ಯಾಳದ ತುಂಗಳ ಶಾಲೆ ನೂರಕ್ಕೆ ನೂರರಷ್ಟು ಫಲಿತಾಂಶ

**ಜಮಖಂಡಿ :** ತಾಲೂಕಿನ ಹುಲ್ಯಾಳದ ತುಂಗಳ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದುಕೊಂಡಿದೆ. ಆಂಗ್ಲ ಮಾಧ್ಯಮದಲ್ಲಿ ದೀಪಾ ಗುರುಬಸಪ್ಪ ಸಜ್ಜನ 625 ಕ್ಕೆ 619 ಅಂಕದೊಂದಿದೆ ರಾಜ್ಯಕ್ಕೆ 7ನೇ ಸ್ಥಾನ, ಶಾಲೆಗೆ ಪ್ರಥಮ ಸ್ಥಾನ ಪಡೆಕೊಂಡಿದ್ದಾಳೆ. ಸುರಭಿ ಹೂಲಿ 618 ಅಂಕ, ಶ್ರೀರಕ್ಷಾ ಅವರಾದಿ 614 ಅಂಕದೊಂದಿಗೆ 22 ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು, 19 ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು, 24 ವಿದ್ಯಾರ್ಥಿಗಳು ಶೇ.85 ರಷ್ಟು ಅಂಕಗಳನ್ನು ಪಡೆದುಕೊಳ್ಳುವ ಮೂಲಕ ತುಂಗಳ ಆಂಗ್ಲ ಮಾಧ್ಯಮ ಶಾಲೆ



ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದಿದೆ. ಕನ್ನಡಮಾಧ್ಯಮದಲ್ಲಿ ಸದಪ್ಪ ಪರಗೊಂಡ ಶೇಗುಣಸಿ 625ಕ್ಕೆ 616 ಅಂಕದೊಂದಿಗೆ ಶಾಲೆಗೆಪ್ರಥಮಸ್ಥಾನಪಡೆದುಕೊಂಡಿದ್ದಾನೆ. ಸೌಮ್ಯ ಹನಮಂತ ದಾನಪ್ಪಗೋಳ 598 ಅಂಕ, ವಿರೇಶ ಶಶಿಕಾಂತ ವಿಶ್ವಬ್ರಾಹ್ಮಣ 592 ಅಂಕದೊಂದಿಗೆ 24 ವಿದ್ಯಾರ್ಥಿಗಳು ಶೇ.85 ರಷ್ಟು ಅಂಕಗಳನ್ನು ಪಡೆದುಕೊಳ್ಳುವ ಮೂಲಕ ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದುಕೊಂಡಿದೆ.

ವಿದ್ಯಾರ್ಥಿಗಳ ವಿಶೇಷ ಸಾಧನೆಗೆ ಸಂಸ್ಥೆ ಟ್ರಸ್ಟಿ ಅಶೋಕ ತುಂಗಳ, ಡಾ.ಲಕ್ಷ್ಮೀ ತುಂಗಳ, ಆಡಳಿತ ಮಂಡಳಿ, ಮುಖ್ಯಶಿಕ್ಷಕ ಡಿ.ಜಿ.ವಾಲಿ ಸಹಿತ ಶಿಕ್ಷಕರು, ಸಿಬ್ಬಂದಿಯವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

## ಬಸವೇಶ್ವರ ಶಾಲೆಯ ಫಲಿತಾಂಶ ಶೇ.91.22ರಷ್ಟು



**ರಬಕವಿ–ಬನಹಟ್ಟಿ :** ಇಲ್ಲಿನ ಅಕ್ಕಮಹಾದೇವಿ ಬಳಗದ ಬಸವೇಶ್ವರ ಕನ್ನಡ ಮಾಧ್ಯಮ ಪ್ರೌಢ ಶಾಲೆಯ ಫಲಿತಾಂಶ ಶೇ.91. 22 ರಷ್ಟಾಗಿದೆ ಎಂದು ಮುಖ್ಯ ಶಿಕ್ಷಕರು ತಿಳಿಸಿದರು.

ಸ್ನೇಹಾ ಪರೀಟ 601 ಅಂಕಗಳನ್ನು ಪಡೆದುಕೊಂಡು ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಶ್ವೇತಾ ಬೋರಗಿ (589) ದ್ವಿತೀಯ, ಸಂಜನಾ (588) ತೃತೀಯ, ಲಕ್ಷ್ಮಿ ಮೋರೆ (569) ನಾಲ್ಕನೆಯ ಮತ್ತು ಶಾಹೀನ್ ಮುಧೋಳ ( 563) ಅಂಕಗಳನ್ನು ಪಡೆದುಕೊಂಡು ಐದನೆಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಒಟ್ಟು 55 ವಿದ್ಯಾರ್ಥಿಗಳಲ್ಲಿ ಒಂಭತ್ತು ಜನ ಅತ್ಯುನ್ನತ ಶ್ರೇಣಿ, 29 ವಿದ್ಯಾರ್ಥಿಗಳು ಪ್ರಥಮ ಮತ್ತು 16 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಮುಖ್ಯ ಶಿಕ್ಷಕ ಎನ್.ಎನ್.ಉಪ್ಪಲದಿನ್ನಿ ತಿಳಿಸಿದರು.

## ಕಾಯಕ ಯೋಗಿಯ ಆದರ್ಶಗಳನ್ನು ಅಳವಡಿಸಿಕೊಳ್ಳಿ

**ರಬಕವಿ :** ಹನ್ನೆರಡನೆಯ ಶತಮಾನದಲ್ಲಿ ಜಗತ್ತು ಕಂಡ ಅಪರೂಪದ ಮಹಾ ಮಾನವತಾವಾದಿ ಹಾಗೂ ಮಹಾನ್ ಸಮಾಜ ಸುಧಾರಕ ಬಸವಣ್ಣನವರ ಕಾಯಕ ನಿಷ್ಠೆಯನ್ನು ಅಳವಡಿಸಿಕೊಳ್ಳಿ ಎಂದು ರಬಕವಿ ವಿರಕ್ತ ಮಠದ ಗುರು ಸಿದ್ದೇಶ್ವರ ಶ್ರೀಗಳು ಹೇಳಿದರು.

ಶುಕ್ರವಾರ ಬಸವ ಜಯಂತಿ ನಿಮಿತ್ಯ ರಬಕವಿ ಶಂಕರಲಿಂಗ ಸರ್ಕಲ್ ನಲ್ಲಿ ಬಸವಣ್ಣನವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ತೆರೆದ ವಾಹನದಲ್ಲಿ ಬಸವಣ್ಣನವರ ಭಾವಚಿತ್ರವನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ಸಂದರ್ಭದಲ್ಲಿ ಮರೆಗುದ್ದಿಯ




ನೀಲ ವಿಜಯ ಮಹಾಂತೇಶ್ವರಿ ತಾಯಿ, ಶರಣರಾದ ಈರಣ್ಣ ಗುಣಕಿ, ಶ್ರೀಶೈಲ ಭುಯ್ಯಾರ, ರಾಜು ಸಾಬೋಜಿ, ಪ್ರಭು ಉಮದಿ, ಈಶ್ವರ ನಾಗರಾಳ, ಬಸವರಾಜ ಮದರಖಂಡಿ, ಡಾ. ಎಂ. ಎಸ್. ಹತಪಾಕಿ, ಮನೋಹರ್ ಮಣಜಿಗಿ, ಗಂಗಾಧರ ಬೆಳವಡಿ, ನೀಲಕಂಠ ಮುತ್ತೂರು, ಬಾಬು ಮಹಾಜನ, ಗಿರೀಶ ಮುತ್ತೂರ, ಕಿರಣ ಬಿಳಿಮೀಸಿ, ಸಾಗರ ನಿಪ್ಪಾಣಿ , ವಿಜಯಕುಮಾರ್ ನಾಶಿ, ಗೌರಿಹರ ಮುತ್ತೂರ, ಶ್ರೀಶೈಲ ಗುಣಕಿ, ಶಿವಾನಂದ ಸಿಂದಗಿ, ರಾಮಣ್ಣ ಹುಲಕುಂದ, ಮಹಾದೇವಪ್ಪ ಮುತ್ತೂರ, ಚಿದಾನಂದ ಪಾಗದ, ಈರಣ್ಣ ಅಂಗಡಿ, ಸದಾಶಿವ ಮಟ್ಟಿಕಲ್ಲಿ , ಮಲ್ಲಿಕಾರ್ಜುನ ಸಾಬೋಜಿ, ಈರಣ್ಣ ಗುಗ್ರಿ, ಸಂಗಯ್ಯ ಅಮ್ಮಣಗಿಮಠ, ಬಾಬು ಗಂಗಾವತಿ, ಅಶೋಕ ಕೋತಿನ ಹಾಗೂ ನೂರಾರು ಮಹಿಳೆಯರು ವಿವಿಧ ಸಂಘ–ಸಂಸ್ಥೆಗಳ ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## ಪತ್ರಾಸ್ ಶೆಡ್, ಕಲ್ಲಿನ ಮನೆಯಲ್ಲಿ ಓದಿ ಸಾಧನೆ ಮಾಡಿದ ಪವಿತ್ರಾ

**ರಬಕವಿ–ಬನಹಟ್ಟಿ :** ಬನಹಟ್ಟಿ ನಗರದ ಬನಶಂಕರಿ ದೇವಸ್ಥಾನದ ಹತ್ತಿರದ ಚಿಕ್ಕದಾದ ಪತ್ರಾಸ್ ಶೆಡ್ ಮತ್ತು ಒಣ ಕಲ್ಲಿನ ಗೋಡೆಯ ಮನೆಯಲ್ಲಿ ಕುಳಿತು ಓದಿದ ಬನಹಟ್ಟಿಯ ಎಸ್ ಆರ್ ಎ ಪ್ರೌಢ ಶಾಲೆಯ ವಿದ್ಯಾರ್ಥಿನಿ ಪವಿತ್ರಾ ಮಠದ 617 ಅಂಕಗಳನ್ನು ಪಡೆದುಕೊಂಡು ಶಾಲೆಗೆ ದ್ವಿತೀಯ ಮತ್ತು ತಾಲ್ಲೂಕಿಗೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಕನ್ನಡ: 124, ಇಂಗ್ಲಿಷ್ 97, ಹಿಂದಿ 98, ಗಣಿತ 99, ವಿಜ್ಞಾನ 99 ಮತ್ತಲು ಸಮಾಜ ವಿಜ್ಞಾನದಲ್ಲಿ 100 ಅಂಕಗಳನ್ನು ಪಡೆದುಕೊಂಡಿದ್ದಾರೆ.

ತಂದೆ ಶಿವಾನಂದ ಕೂಲಿ ನೇಕಾರರಾಗಿದ್ದಾರೆ. ತಾಯಿ ಶೋಭಾ ಮನೆಗೆಲಸ ಮಾಡುತ್ತಾರೆ.



ಇನ್ನಷ್ಟು ಅಂಕಗಳನ್ನು ಬರಬೇಕಾಗಿತ್ತು ಎಂದು ಪವಿತ್ರಾ ಮಠದ ತಿಳಿಸಿದರು.

## ಸಮಾನತೆಯ ಹರಿಕಾರ ಬಸವೇಶ್ವರರು


**ರಬಕವಿ–ಬನಹಟ್ಟಿ :** ಅನುಭವ ಮಂಟಪದ ಮೂಲಕ ಮಹಿಳೆಯರಿಗೂ ಸೇರಿದಂತೆ ಪ್ರತಿಯೊಬ್ಬರಿಗೂಸಮಾನತೆಯನ್ನುನೀಡಿದ ಬಸವಣ್ಣಸಮಾನತೆಯಹರಿಕಾರರಾಗಿದ್ದಾರೆ ಎಂದು ರಬಕವಿ ಬನಹಟ್ಟಿ ತಾಲ್ಲೂಕಿನ ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು.

ಶುಕ್ರವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು. ಬಸವೇಶ್ವರರು ತಮ್ಮ ವಚನಗಳ ಮೂಲಕ ಸಮಾಜದಲ್ಲಿ



ಮಹತ್ತರವಾದ ಬದಲಾವಣೆಗಳನ್ನು ತಂದರು.ಮಾನವಹಕ್ಕುಗಳನ್ನುಪ್ರತಿಪಾದನೆ ಮಾಡುವುದರ ಜೊತೆಗೆ ಅವುಗಳನ್ನು ಕಾರ್ಯ ರೂಪಕ್ಕೆ ಕೂಡ ತಂದ ಮೊದಲ ವ್ಯಕ್ತಿಬಸವಣ್ಣ.ಬಸವಣ್ಣನವರವಚನಗಳನ್ನು ಗಮನಿಸಿದಾಗ ಅದರಲ್ಲಿ ಮಾನವ ಹಕ್ಕುಗಳ ಬಹಳಷ್ಟುಅಂಶಗಳುಒಳಗೊಂಡಿವೆ ಎಂದು ತಹಶೀಲ್ದಾರ್ ಸ್ವಾದಿ ತಿಳಿಸಿದರು.

ಶಿರಸ್ತೆದಾರ ಎಸ್.ಎಲ್.ಕಾಗಿಯವರ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಭೀಮಶಿ ಮಗದುಮ್, ಮಹಾದೇವ ಕೋಟ್ಯಾಳ, ವೆಂಕಟೇಶ ನಿಂಗಸಾನಿ, ಸಿದ್ದಪ್ಪ ಮೇಣಿ, ಪ್ರಕಾಶ ಪಟ್ಟಣಶೆಟ್ಟಿ, ಸದಾಶಿವ ಕುಂಬಾರ, ಚೇತನ ಭಜಂತ್ರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



**ರಬಕವಿ–ಬನಹಟ್ಟಿ : ಸರ್ಕಾರಿ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಆಚರಣೆ ಜರುಗಿತು. ಈ ಸಂದರ್ಭದಲ್ಲಿ ತೇರದಾಳ ಮತ ಕ್ಷೇತ್ರದ ಶಾಸಕರಾದ ಸಿದ್ದೂ ಸವದಿ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಬಸವರಾಜ ಬೆಳಗಲಿ ಮುಖ್ಯೋಪಾಧ್ಯಾಯರಾದ ಜಿ. ಆರ್. ನಾವಿ, ಸಹ ಶಿಕ್ಷಕರಾದ ಎಂ. ಎಸ್. ಗಡೆನ್ನವರ, ಗುರು ಮಾತೆಯರಾದ ಶ್ರೀಮತಿ ಆರ್. ಎಸ್. ಝುಳಕಿ, ಬಿಸಿ ಊಟ ಸಿಬ್ಬಂದಿಗಳಾದ ಶ್ರೀಮತಿ ಸುರೇಖಾ ಪಿಸೆ ಹಾಗೂ ಶಾಲಾಭಿವೃದ್ಧಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.**

## ಮಹಾತ್ಮರ ಜಯಂತಿಗಳಿಗೆ ಅಧಿಕಾರಿಗಳ ನಿರ್ಲಕ್ಷ್ಯ
## ವ್ಯವಸ್ಥೆ ಸರಿಪಡಿಸದಿದ್ದರೆ ಪುರಸಭೆಗೆ ಬೀಗ–ಸದಸ್ಯರ ಎಚ್ಚರಿಕೆ

**ತೇರದಾಳ :** ನಾಡಿನ ಏಳಿಗೆಗಾಗಿ ಸಾಮಾಜಿಕ ಆಧ್ಯಾತ್ಮಿಕವಾಗಿ ಹಲವು ಮಹಾತ್ಮರು ತಮ್ಮದೆಯಾದ ಕೊಡುಗೆ ನೀಡಿದ್ದಾರೆ. ಅಂತಹ ಮಹಾತ್ಮರನ್ನು ನೆನಪಿಸಿಕೊಳ್ಳುವ ಉದ್ದೇಶದಿಂದ ಸರಕಾರಗಳು ಅವರ ಜಯಂತಿ ಕಾರ್ಯಕ್ರಮಗಳನ್ನು ಆಚರಿಸಲು ಆದೇಶ ಮಾಡಿವೆ. ಆದರೆ ಇಲ್ಲಿನ ಪುರಸಭೆ ಅಧಿಕಾರಿಗಳು ಮಾತ್ರ ಮಹಾತ್ಮರ ಜಯಂತಿಗಳಿಗೆ ಹಾಜರಾಗದೆ ನಿರ್ಲಕ್ಷ್ಯ ವಹಿಸುತ್ತಿರುವುದು ಖಂಡನೀಯವಾಗಿದೆ ಎಂದು ಪುರಸಭೆ ಸದಸ್ಯರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಸದಸ್ಯರು, ವಿಶ್ವಗುರು ಬಸವೇಶ್ವರ ಜಯಂತಿಗೆ ಮುಖ್ಯಾಧಿಕಾರಿಯಾಗಲಿ, ಕಚೇರಿ ವ್ಯವಸ್ಥಾಪಕರಾಗಲಿ ಯಾರು ಬಂದಿಲ್ಲ. ಇತರೆ ಸಿಬ್ಬಂದಿ ಬಂದು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಹೋಗಿದ್ದಾರೆ. ಇದೊಂದೆ ಜಯಂತಿ ಅಲ್ಲ. ಬದಲಾಗಿ ಯಾವುದೇ ಮಹಾತ್ಮರ ಜಯಂತಿ ಇದ್ದರೂ ಅಧಿಕಾರಿಗಳು ಸರಿಯಾಗಿ ಬರುವುದಿಲ್ಲ. ಸದಸ್ಯರುಗಳಿಗೂ ಕರೆಯುವುದಿಲ್ಲ ಎಂದು ಆರೋಪಿಸಿದ್ದಾರೆ.

ವ್ಯವಸ್ಥೆ ಸರಿಪಡಿಸಿ– ಕಳೆದ ಒಂದು ವರ್ಷದಿಂದ ಉಪವಿಭಾಗಾಧಿಕಾರಿಗಳು ತೇರದಾಳ ಪುರಸಭೆ ಆಡಳಿತಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ. ಆದರೆ ಇದುವರೆಗೆ ಒಂದು ದಿನವೂ ಸದಸ್ಯರ ಸಭೆ ನಡೆಸಿಲ್ಲ. ಪಟ್ಟಣದಲ್ಲಿನ ಸಮಸ್ಯೆಗಳ ಕುರಿತು ಗಮನ ಹರಿಸಿಲ್ಲ. ಭೀಕರ ಬರಗಾಲ ಎದುರಾದರು ಒಂದು ದಿನ ಬಂದಿಲ್ಲ ಎಂದು ಆಡಳಿತಾಧಿಕಾರಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಎಪ್ರೀಲ್ ತಿಂಗಳಲ್ಲಿ ತೆರಿಗೆ ಪಾವತಿಸಲು ಐದು ಪ್ರತಿಶತ ರಿಯಾಯಿತಿ ಹೇಳಿದರು. ಆದರೆ ತೆರಿಗೆ ಪಾವತಿಸಲು ಬಂದ ಸಾರ್ವಜನಿಕರಿಗೆ ಉತಾರ ಕೊಡಲು, ಹಣ ಪಾವತಿಸಿದ ಬಗ್ಗೆ ದಾಖಲೆ ನಮೂದಿಸಲು ಯಾರು ಇರಲಿಲ್ಲ. ಅಲ್ಲದೆ ತೆರಿಗೆ ಪಾವತಿಸುವ ದಾಖಲೆ ನೀಡಲು ಕೂಡ ಯಾವೊಬ್ಬ ಸಿಬ್ಬಂದಿ ಇರಲಿಲ್ಲ. ಪುರಸಭೆಯಲ್ಲಿ ಅಧಿಕಾರಿಗಳು ಇಷ್ಟೊಂದು ಬೇಜವಾಬ್ದಾರಿತನದಿಂದ ನಡೆದುಕೊಳ್ಳುತ್ತಿದ್ದರು ಆಡಳಿತಾಧಿಕಾರಿಗಳು ಮಾತ್ರ ತಮಗೆ ಏನು ಸಂಬಂಧ ಇಲ್ಲದಂತ ಇದ್ದಾರೆ. ಇದರಿಂದ ಸಾರ್ವಜನಿಕರ ಕಡೆಯಿಂದ ಸದಸ್ಯರುಗಳು ಛೀಮಾರಿ ಹಾಕಿಸಿಕೊಳ್ಳುವ ಪರಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದ್ದಾರೆ.

ಆದ್ದರಿಂದ ಆಡಳಿತಾಧಿಕಾರಿಗಳು ಕೂಡಲೇ ಪುರಸಭೆಗೆ ಆಗಮಿಸಿ ವ್ಯವಸ್ಥೆ ಸರಿಪಡಿಸಬೇಕು.

ಇಲ್ಲದಿದ್ದರೆ ಪುರಸಭೆಗೆ ಬೀಗ ಹಾಕಿ ಪ್ರತಿಭಟಿಸಲಾಗುವುದು ಎಂದು ಸದಸ್ಯರಾದ ಸಂತೋಷ ಜಮಖಂಡಿ, ಸಚಿನ ಕೊಡತೆ, ರೂಪಾ ಶಂಕರ ಕುಂಬಾರ, ಸುರೇಶ ಕಬಾಡಗಿ, ಸಂಗೀತಾ ಕೇದಾರಿ ಪಾಟೀಲ, ಶಿಲ್ಪಾ ಗೌತಮ ರೋಡಕರ, ಪಜಲ್ ಅತಾರಾವುತ್, ಶಾಂತವ್ವ ಕಾಲತಿಪ್ಪಿ ಇತರೆ ಸದಸ್ಯರು ಎಚ್ಚರಿಕೆ ನೀಡಿದ್ದಾರೆ.

# ರೈತನ ಮಗಳು ರೂಪಾ ದಾನಗೊಂಡ ಪ್ರೌಢಶಾಲೆಗೆ ಪ್ರಥಮ: ಶಿಕ್ಷಕರಿಂದ ಸನ್ಮಾನ

**ಮಹಾಲಿಂಗಪುರ :** ಪಟ್ಟಣದ ತೋಟದ ವಸತಿಯಲ್ಲಿನ ವಿದ್ಯಾರ್ಥಿನಿ ರೂಪಾ ದಾನಗೊಂಡ ನಿತ್ಯ 6 ಕಿಮೀ ಸೈಕಲ್ ತುಳಿದು ಶಾಲೆಗೆ ಹೋಗಿ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲೆಗೆ ಪ್ರಥಮ ರ್‍ಯಾಂಕ್‌ನಲ್ಲಿ ಪಾಸಾಗುವ ಮೂಲಕ ತಂದೆ ತಾಯಿಗಳಲ್ಲಿ ಸಾರ್ಥಕತೆಯ ಸಂಭ್ರಮ ಉಂಟು ಮಾಡಿದ್ದಾಳೆ.

ಢವಳೇಶ್ವರ ರಸ್ತೆಯಲ್ಲಿನ ತೋಟದ ಮನೆಯಿಂದ ಸೈಕಲ್ ತುಳಿಯುತ್ತ ಮಹಾಲಿಂಗಪುರದ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಓದಿ ವಾರ್ಷಿಕ ಪರೀಕ್ಷೆಯಲ್ಲಿ 597 ಅಂಕ ಪಡೆದು



ಶೇ.95.52 ಫಲಿತಾಂಶದೊಂದಿಗೆ ಶಾಲೆಗೆ ಪ್ರಥಮ ರ್‍ಯಾಂಕ್‌ನಲ್ಲಿ ಪಾಸಾಗಿದ್ದಾಳೆ.

ಫಲಿತಾಂಶ ಹೊರಬೀಳುತ್ತಿದ್ದಂತೆ ಪ್ರೌಢಶಾಲೆಯ ಹಾಗೂ ಪಿಯು ಕಾಲೇಜಿನ ಸಿಬ್ಬಂದಿ ವಿದ್ಯಾರ್ಥಿನಿಯ ತೋಟದ ಮನೆಗೆ ತೆರಳಿ ಆಕೆಯ ಪಾಲಕರ ಸಮ್ಮುಖದಲ್ಲಿ ಸನ್ಮಾನ ಮಾಡಿ ಅಭಿನಂದಿಸಿದರು. ಸಿಹಿ ತಿನ್ನಿಸಿ ಖುಷಿ ಹಂಚಿಕೊಂಡರು. ಎಸ್‌ಸಿಪಿ ಕಾಲೇಜಿನವರು ಡೊನೇಶನ್ ರಹಿತ ಪ್ರವೇಶ ನೀಡುವ ಭರವಸೆ ನೀಡಿದರು.

ಮಗಳ ಸಾಧನೆಗೆ ಇಡೀ ಶಾಲೆಯೇ ಮನೆಗೆ ಬರುವಂತಾಗಿದ್ದಕ್ಕೆ ಮನೆಯವರು ಸಂತೋಷದಿಂದ ಭಾವುಕರಾದರು. ಎಲ್ಲ ಸಿಬ್ಬಂದಿಗೆ ಸಿಹಿ ತಿನ್ನಿಸಿ ಪಾನಕ ನೀಡಿ ಕೃತಜ್ಞತೆ ಸಲ್ಲಿಸಿದರು. ಉಪಪ್ರಾಂಶುಪಾಲ ಬಿ.ಎನ್.ಅರಕೇರಿ, ಉಪನ್ಯಾಸಕ ಆರ್.ಎನ್.ಪಟ್ಟಣಶೆಟ್ಟಿ, ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕಿ ಸಪನಾ ಅನಿಗೋಳ, ಎಸ್.ವಿ.ಸಿದ್ನಾಳ, ಬಿ.ಬಿ.ಯಲ್ಲಟ್ಟಿ, ಪಿ.ಎಸ್.ಹಿಪ್ಪರಗಿ, ರವಿ ಲಕ್ಕನಗೋಳ ಇದ್ದರು.

# ಮೇ.19ರಂದು ಪ್ರವೇಶ ಪರೀಕ್ಷೆ

**ವಿಜಯಪುರ :** ವಿಜಯಪುರ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳ 2024–25ನೇ ಶೈಕ್ಷಣಿಕ ಸಾಲಿನ 6ನೇ ತರಗತಿಯ ಪ್ರವೇಶಕ್ಕಾಗಿ ಮೇ.19ರಂದು ಪ್ರವೇಶ ಪರೀಕ್ಷೆ ನಡೆಯಲಿದೆ. ಪ್ರವೇಶ ಪತ್ರವನ್ನು ಅರ್ಜಿ ಸಲ್ಲಿಸಿದ ಆಯಾ ತಾಲೂಕಿನ ವಸತಿ ಶಾಲೆಯಲ್ಲಿ ಪಡೆಯಬಹುದಾಗಿದೆ.

**ಪ್ರವೇಶ ಪರೀಕ್ಷೆಗಳು ನಡೆಯುವ ಕೇಂದ್ರಗಳ ವಿಳಾಸ ಹಾಗೂ ಪ್ರಾಂಶುಪಾಲರ ಸಂಪರ್ಕ ಸಂಖ್ಯೆ:**

ತಿಕೋಟಾದ ಡಾ. ಎ.ಪಿ.ಜೆಅಬ್ದುಲ್ ಕಲಾಂ ವಸತಿಶಾಲೆ, ಅರಕೇರಿ (8971459683), ಸರಕಾರಿ ಮುಸ್ಲಿಂ ವಸತಿ ಶಾಲೆ ಅಫಜಲಪುರಟಕ್ಕೆ ವಿಜಯಪುರ (8310830407) ಚಡಚಣ ತಾಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಲಹಳ್ಳಿ (9620828185) ಸಿಂದಗಿಯಎಚ್.ಜಿ.ಪಿಯುಕಾಲೇಜುವಿವೇಕಾನಂದ ಸರ್ಕಲ್ ಸಿಂದಗಿ, ಹೆಚ್.ಟಿ. ಕುಲಕರ್ಣಿ, ಪ್ರೌಢಶಾಲೆ, ಸಿಂದಗಿ(9980952960), ಶಾಂತೇಶ್ವರ ಪಿಯು ಕಾಲೇಜು ಬಸ್‌ಸ್ಟ್ಯಾಂಡ್ ಹತ್ತಿರ ಮಿನಿವಿಧಾನಸೌಧ ಇಂಡಿ (7892371709), ಅಭ್ಯುದಯ ಆಂಗ್ಲ ಮಾಧ್ಯಮ ಶಾಲೆ ಮುದ್ದೇಬಿಹಾಳ (7259179398), ಎಂ.ಜಿ.ಎಂ.ಕೆಆಂಗ್ಲಮಾಧ್ಯಮಶಾಲೆಮುದ್ದೇಬಿಹಾಳ (9844493306). ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಛೇರಿ, ವಿಜಯಪುರ 08352–295523, ತಾಲೂಕು ಮಾಹಿತಿ ಕೇಂದ್ರ, ವಿಜಯಪುರ 8123710766, ತಾಲೂಕು ಮಾಹಿತಿ ಕೇಂದ್ರ, ಬ.ಬಾಗೇವಾಡಿ 9972340721, ತಾಲೂಕು ಮಾಹಿತಿ ಕೇಂದ್ರ, ಮುದ್ದೇಬಿಹಾಳ 8722445552, 5 ತಾಲೂಕು ಮಾಹಿತಿ ಕೇಂದ್ರ, ಇಂಡಿ 9900109759, 6 ತಾಲೂಕು ಮಾಹಿತಿ ಕೇಂದ್ರ, ಸಿಂದಗಿ 9035558609 ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್‌ಎಸ್‌ಎಲ್‌ಸಿ ಫಲಿತಾಂಶ ಚಿಮ್ಮಡ ವಿದ್ಯಾರ್ಥಿಗಳ ಸಾಧನೆ

**ಚಿಮ್ಮಡ :** ಗ್ರಾಮದ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ರ್‍ಯಾಂಕ್ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.

ಇಲ್ಲಿನ ಸರಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿ ಪರೀಕ್ಷೆಗೆ ಹಾಜರಾದ 156 ವಿದ್ಯಾರ್ಥಿಗಳಲ್ಲಿ 116 ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿದ್ದು ಅದರಲಿ ್ಲ15 ವಿದ್ಯಾರ್ಥಿನಿಯರು ಅತ್ಯತ್ತಮ ಶ್ರೇಣಿ 43 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿತೇರ್ಗಡೆಹೊಂದಿದ್ದು ಶಾಲೆಯ ಒಟ್ಟು ಫಲಿತಾಂಶ ಶೇ. 74.35 ಪಡೆದಿದೆ ಎಂದು ಶಾಲೆಯ ಪ್ರಭಾರ ಮುಖ್ಯೋಪಾದ್ಯಾಯೇ ಶ್ರೀಮತಿ ಎಂ.ಎಸ್. ಜಿಟ್ಟಿ ತಿಳಿಸಿದ್ದಾರೆ. ಕುಮಾರಿ ಭವಾನಿ ಕಾಡಪ್ಪಾ ನಿಂಬರಗಿ 625ಕ್ಕೆ 614 (ಶೇ. 98.24) ಕನ್ನಡ ವಿಷಯದಲ್ಲಿ ಶೇ 100 ಅಂಕಗಳಿಸುವ ಮೂಲಕ ಪ್ರೌಢಶಾಲೆಗೆ ಪ್ರಥಮ ಸ್ಥಾನ ಪಡೆದರೆ,ಕುಮಾರಿಸುಷ್ಮಾರಮೇಶ ಸಾವಳಗಿ 609 (ಶೇ. 97.44) ಅಂಕ ಪಡೆದು ಶಾಲೆಗೆ ದ್ವಿತೀಯ ಪಡೆದಿದ್ದು, ಕುಮಾರಿ ದಾನಮ್ಮ ಗುರುಪಾದಯ್ಯ ಹಳ್ಳದಮಠ 580 (92.80) ಪಡೆದು ಶಾಲೆಗೆ ತ್ರತೀಯ ಹಾಗೂ ಕುಮಾರಿ ಉಷಾ ಪುಂಡಲಿಕ ಬಳಗಾರ 581 (92.80) ಕುಮಾರಿ ಸ್ಪೂರ್ತಿ ರಾಮಪ್ಪಾಬಳಗಾರ578(92.48) ಕುಮಾರಿ ಸೌಮ್ಯ ಚನನಪ್ಪಾ ಗೋಕಾವಿ577(92.32)ಕುಮಾರಿ ಆಶಿಷಾ ಸೈಪನಸಾಬ ಜಮಖಂಡಿ 576(92.16)ಕುಮಾರಿನಿರ್ಮಲಾ ಹೊನ್ನಪ್ಪ ಉರಭಿನವರ 572 (91.52) ಕುಮಾರಿ ಅನಿತಾ ದುಂಡಪ್ಪ ಕವಟಕೊಪ್ಪ 569 (91.04) ಕುಮಾರಿ ಸ್ನೇಹಾ ಶ್ರೀಶೈಲ ಬುರಡಿ 558 (89.28) ಕುಮಾರಿ ಗುರುದೇವಿ ನಂದೆಪ್ಪ ಮಾಡಲಗಿ 549 (87.84) ಕುಮಾರಿ ಪೂಜಾ ಮಹಾದೇವ ಬೆಳಗಲಿ 542 (86.72) ಕುಮಾರಿ ನಂದಾ ಬಸಪ್ಪಾ ಹುಕ್ಕೇರಿ 540 (86.40) ಕುಮಾರಿ ಪರೀತಿ ಬಸಪ್ಪಾ ಹತ್ತರಕಿ 538 (86.08) ಕುಮಾರಿ ಕುಸುಮಾ ಸಂಗಪ್ಪಾ ದೊಡಮನಿ 536 (85.76) ಅಂಕಗಳನ್ನು ಪಡೆದುಕೊಂಡು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದುವ ಮೂಲಕ ಉತ್ತಮ ಸಾಧನೆಗೈದಿದ್ದಾರೆ. ಗ್ರಾಮಕ್ಕೆ ಕೀರ್ತಿ ತಂದಿರುವ ಈ ವಿದ್ಯಾರ್ಥಿಗಳನ್ನು ಎಸ್‌ಡಿಎಂಸಿ ಅಧ್ಯಕ್ಷ ಮಾರುತಿ ಮಮದಾಪೂರ ಸದಸ್ಯರು ಶಾಲಾ ಶಿಕ್ಷಕರು, ಸ್ಥಳಿಯ ಗ್ರಾಮ ಪಂಚಾಯತಿ ಹಾಗೂ ಅರುಣೋದಯ ಗ್ರಾಮೀಣಾಭಿವೃದ್ದಿ ಸಂಘ, ಬಸವೇಶ್ವರ ಯುವಕ ಸಂಘದ ಪಧಾದಿಕಾರಿಗಳು ಅಭಿನಂದಿಸಿದ್ದಾರೆ.

# ಪಯೋನಿಯರ್ ಶಾಲೆ ಎಸ್‌ಎಸ್‌ಎಲ್‌ಸಿ ಉತ್ತಮ ಸಾಧನೆ



**ಕೊಪ್ಪಳ :** ಇಲ್ಲಿನ ಭಾಗ್ಯನಗರದ ಪ್ರತಿಷ್ಠಿತ ಪಯೋನಿಯರ್ ಪಬ್ಲಿಕ್ ಶಾಲೆಯ ಮೊದಲ ಎಸ್.ಎಸ್.ಎಲ್.ಸಿ ಬ್ಯಾಚ್ ಫಲಿತಾಂಶ ಬಂದಿದ್ದು 17 ವಿದ್ಯಾರ್ಥಿಗಳಲ್ಲಿ 16 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.94.11% ಫಲಿತಾಂಶ ಬಂದಿದೆ. ಶಾಲೆಯ ಅನನ್ಯ (591) ಶೇ. 94.56, ಸಾಹಿತ್ಯ ಗೊಂಡಬಾಳ (587) ಶೇ. 93.92, ಗೌರಿಶಂಕರ (581) ಶೇ. 92.96, ಇಕ್ರಾಉರೂಜ್ (570) ಶೇ. 91.20, ಶ್ರಾವಣಿ (568) ಶೇ. 90.88, ಅರುಂಧತಿ (552) ಶೇ. 88.32 ರಷ್ಟು ಫಲಿತಾಂಶ ಪಡೆದು ಶಾಲೆಯಆಡಳಿತಮಂಡಳಿಯನಗದುಬಹುಮಾನಕ್ಕೆ ಭಾಜನರಾಗಿದ್ದಾರೆ.

ಶಾಲೆಯ 17 ವಿದ್ಯಾರ್ಥಿಗಳಲ್ಲಿ ಆರು ಡಿಸ್ಟಿಂಕ್ಷನ್, ಎಂಟು ಜನ ಫಸ್ಟ್ ಕ್ಲಾಸ್ ಮತ್ತು ಇಬ್ಬರು ಪಾಸ್ ಕ್ಲಾಸ್‌ನಲ್ಲಿ ತೇರ್ಗಡೆಯಾಗಿದ್ದು ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಕೃಷ್ಣಾ ಇಟ್ಟಂಗಿ, ಕಾರ್ಯದರ್ಶಿ ಕೃಷ್ಣಾ ಕಬ್ಬೇರ್, ಪ್ರಾಂಶುಪಾಲರು ಮತ್ತು ಸಿಬ್ಬಂದಿ ಸಂತಸ ವ್ಯಕ್ತಪಡಿಸಿದ್ದಾರೆ. ಅಲ್ಲದೇ ಈಚೆಗೆ ಗದುಗಿನಲ್ಲಿ ದುಷ್ಕರ್ಮಿಗಳಿಂದ ಹತ್ಯೆಗೀಡಾದ ಕುಮಾರಿ ಆಕಾಂಕ್ಷ ಹಾದಿಮನಿ ಸಹ 369 ಅಂಕಗಳೊಂದಿಗೆ ತೇರ್ಗಡೆಯಾಗಿದ್ದು, ಆಕೆಯ ಸಾವಿಗೆ ಆಡಳಿತ ಮಂಡಳಿ ಕಂಬನಿ ಮಿಡಿದಿದ್ದು ಸಂತಾಪ ಸೂಚಿಸಿದೆ.

# ಪ್ರತಿಷ್ಠಿತ ಶಾಲೆ: 6ನೇ ತರಗತಿ ಪ್ರವೇಶಕ್ಕೆ ಅರ್ಜಿ

**ಬಾಗಲಕೋಟೆ :** ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಿಗೆ ಪ್ರತಿಭಾವಂತ ಪರಿಶಿಷ್ಟ ಜಾತಿ, ಪಂಗಡ ವರ್ಗದ 5ನೇ ತರಗತಿ ಪಾಸಾದ ವಿದ್ಯಾರ್ಥಿಗಳನ್ನು 2024–25ನೇ ಸಾಲಿಗೆ 6ನೇ ತರಗತಿಗೆ ಸೇರ್ಪಡೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬೀಳಗಿಯ ಹೋಲಿಸೆಂಟ್ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ, ಗುಳೇದಗುಡ್ಡದ ನೆಹರೂ ಇಂಟರ್ ನ್ಯಾಷನಲ್ ಶಾಲೆ, ಸೂಳಿಕೇರಿ ಲಕ್ಷ್ಮೀ ರಂಗನಾಥ ಪ್ರಾಥಮಿಕ ಶಾಲೆ ಹಾಗೂ ಲೋಕಾಪೂರ ಎಕ್ಸಪರ್ಟ ಆಂಗ್ಲ ಮಾಧ್ಯಮ ಶಾಲೆಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದವರಾಗಿರಬೇಕು. ಬಾಲಕಿಯರಿಗೆ ಶೇ.50 ರಷ್ಟು ಹಾಗೂ ಗ್ರಾಮೀಣ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಸೀಟುಗಳು ಮೀಸಲಿಡಲಾಗಿದೆ. ಕುಟುಂಬದ ಎರಡು ಮಕ್ಕಳಿಗೆ ಅಂದರೆ ಒಬ್ಬ ಬಾಲಕ ಮತ್ತು ಬಾಲಕಿಗೆ ಅವಕಾಶವಿದೆ. ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆಯ ಮೂಲಕ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಅರ್ಜಿ ಸಲ್ಲಿಸುವ ಕೊನೆಯ ದಿನ ಮೇ 21 ಆಗಿದ್ದು, ಅರ್ಜಿಯನ್ನು ಆಯಾ ತಾಲೂಕಾ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಎಲ್ಲ ದಾಖಲೆಗಳೊಂದಿಗೆ ಹಾಜರಾಗಿ ಆನ್‌ಲೈನ್ ಮೂಲಕ ಸಲ್ಲಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವಗುರು ಜಗಜ್ಯೋತಿ ಬಸವೇಶ್ವರರ ಕಟ್ಟಾ ಅನುಯಾಯಿಯಾಗಿದ್ದ ಮಹಾತ್ಮ ಶರಣಬಸವೇಶ್ವರರು: ಡಾ. ಬಿಡವೆ

**ಕಲಬುರಗಿ :** 12ನೇ ಶತಮಾನದ ಸಮಾನತೆ ಹರಿಕಾರ ಜಗತ್ತು ಕಂಡ ಮಹಾನ್ ಚಿಂತಕ ಜಗಜ್ಯೋತಿ ಬಸವೇಶ್ವರರ ತತ್ವ, ಆದರ್ಶ ಹಾಗೂ ಅವರ ಸಂದೇಶಗಳನ್ನು ಶರಣಬಸವೇಶ್ವರರು ತಮ್ಮ ಜೀವನದುದ್ದಕ್ಕೂ ಅಕ್ಷರ ಸಹ ಪಾಲಿಸಿಕೊಂಡು ಬಂದು ಕಾಯಕವೇ ಕೈಲಾಸವೆಂದು ಮನಗೊಂಡು ಜನಸೇವೆ ಮಾಡಿ ಜನಮನದಲ್ಲಿ ನೆಲೆಸಿದರು ಎಂದು ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಅನಿಲಕುಮಾರ ಬಿಡವೆ ಅಭಿಪ್ರಾಯ ಪಟ್ಟರು.



ಶರಣಬಸವ ವಿಶ್ವವಿದ್ಯಾಲಯದ ಕಾನ್ಫರೆನ್ಸ್ ಹಾಲ್‌ನಲ್ಲಿ ಶುಕ್ರವಾರದಂದು ಜಗಜ್ಯೋತಿ ಬಸವೇಶ್ವರರ 891ನೇ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಶರಣ ಸಂಸ್ಥಾನದ ಎಲ್ಲಾ ಪೂರ್ವ ಪೀಠಾಧಿಪತಿಗಳು, ಬಸವೇಶ್ವರರು ಹಾಕಿಕೊಟ್ಟ ಹಾದಿಯಲ್ಲಿ ನಡೆದು ಕಾಯಕ ಮತ್ತು ದಾಸೋಹಕ್ಕೆ ಪ್ರಮಾಣಿಕ ಪ್ರಯತ್ನ ಮಾಡಿದ್ದಾರೆ ಎಂದು ತಿಳಿಸಿದರು. ಸಾಮಾಜಿಕಕ್ರಾಂತಿಯಹರಿಕಾರ 12ನೇ ಶತಮಾನದಲ್ಲಿ ಅನುಭವ ಮಂಟಪದ ಮುಖಾಂತರ ಪ್ರಜಾಪ್ರಭುತ್ವದ ಕಲ್ಪನೆಯನ್ನು ವಿಶ್ವಕ್ಕೆ ಪರಿಚಯಿಸಿದ ವಿಶ್ವಮಾನವತಾವಾದಿ ಜಗಜ್ಯೋತಿ ಬಸವೇಶ್ವರರು ಹಾಕಿಕೊಟ್ಟ ಮಾರ್ಗದಲ್ಲಿಮುನ್ನಡೆದುಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿಗಳಾದ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿಯವರು, 2003ನೇ ಇಸವಿಯಲ್ಲಿ ಸಂಸತ್ತಿನ ಆವರಣದಲ್ಲಿ ಜಗಜ್ಯೋತಿ ಬಸವೇಶ್ವರರ ಮೂರ್ತಿಯನ್ನು ಪ್ರತಿಷ್ಠಾಪಿಸಿಹೆಗ್ಗಳಿಕೆಗೆಪಾತ್ರರಾದದಿನವನ್ನು ಇದೇ ಸಂಧರ್ಭದಲ್ಲಿ ನೆನೆಸಿಕೊಂಡರು.

ಶರಣಬಸವ ವಿಶ್ವವಿದ್ಯಾಲಯದ ಎಲ್ಲಾ ಸಿಬ್ಬಂದಿಗಳು ಬಸವೇಶ್ವರರು ಕಾಯಕವೇ ಕೈಲಾಸವೆಂದು ಹೇಳಿದ ಹಾಗೆ ಶ್ರಮ ಪಟ್ಟು ವಿಶ್ವವಿದ್ಯಾಲಯವನ್ನು ಹೆಮ್ಮರವಾಗಿ ಬೆಳೆಸಿದ್ದಾರೆ. ನಾವೆಲ್ಲರೂ ಸೇರಿ ಇದನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯಲು ಪರಿಶ್ರಮ ಪಡಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಕಲ್ಯಾಣರಾವ್ ಪಾಟೀಲ, ಇಂದು ನಮ್ಮ ವಿವಿಯಲ್ಲಿ ಉದ್ಯಮಿ ಡಾ. ಎಸ್. ಎಸ್. ಪಾಟೀಲ ಅವರ ದೇಣಿಗೆಯಿಂದ ಬಸವೇಶ್ವರರ ಅಧ್ಯಯನ ಪೀಠ ಪ್ರಾರಂಭವಾಗಿದೆ. ಕಳೆದ ವರ್ಷ ಬಸವಕಲ್ಯಾಣದಲ್ಲಿ ಜರುಗಿದ ರಾಷ್ಟ್ರೀಯ ವಿಚಾರ ಸಂಕೀರಣದಲ್ಲಿ ಬಸವೇಶ್ವರರ ಸಂಶೋಧನಾ ಪುಸ್ತಕ ಹೊರತಂದಿದ್ದು ವಿಶೇಷ ಎಂದರು. ಇದುವರೆಗೆ ಇಂಗ್ಲೀಷನ ಖ್ಯಾತ ನಾಟಕಕಾರ ಮತ್ತು ಕವಿ ವಿಲಿಯಂ ಶೇಕ್ಸಪಿಯರ್ ಹೆಸರಲ್ಲಿ ಅತಿಹೆಚ್ಚು ಸಂಶೋಧನೆಗಳಾಗಿದ್ದು, ಭಾರತೀಯ ಭಾಷೆಯಾದ ಕನ್ನಡ ಭಾಷೆಯಲ್ಲಿ ಅತಿಹೆಚ್ಚು ಸುಮಾರು 29 ಸಂಶೋಧನೆಗಳು ಜಗಜ್ಯೋತಿ ಬಸವೇಶ್ವರರ ಹೆಸರಿನಲ್ಲಾಗಿವೆ ಬಿಟ್ಟರೆ 10 ಸಂಶೋಧನೆಗಳು ಅಕ್ಕಮಾಹಾದೇವಿಯವರ ಕುರಿತಾಗಿವೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಡಾ. ಎಸ್. ಎಚ್. ಹೊನ್ನಳ್ಳಿ, ಡೀನ್ ಡಾ. ಲಕ್ಷ್ಮೀ ಪಾಟೀಲ ಮಾಕಾ ಹಾಗೂ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಟಿ. ವಿ. ಶಿವಾನಂದನ್ ಸೇರಿದಂತೆ ಕನ್ನಡ, ಇಂಗ್ಲೀಷ ಹಾಗೂ ಪತ್ರಿಕೋದ್ಯಮ ವಿಭಾಗದ ಸಿಬ್ಬಂದಿಯವರು ಉಪಸ್ಥಿತರಿದ್ದರು.

ಡಾ. ನಾನಾಸಾಹೇಬ್ ಹಚ್ಚಡದ ಕಾರ್ಯಕ್ರಮನ್ನು ನಿರೂಪಿಸಿ ವಂದಿಸಿದರು.

# 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ಬೆಳಗಾವಿ ::** 2024–25ನೇ ಸಾಲಿಗೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಬೆಳಗಾವಿ ಜಿಲ್ಲೆಯವರಾಗಿದ್ದು ಪರಿಶಿಷ್ಟ ಪಂಗಡ–ಕ್ಕೆ ಸೇರಿರಬೇಕು. ವಿದ್ಯಾರ್ಥಿ ತಂದೆ, ಪೋಷಕರ ವಾರ್ಷಿಕ ಆದಾಯ 2. ಲಕ್ಷ ಮಿತಿಯೊಳಗಿರಬೇಕು, ಕಡ್ಡಾಯವಾಗಿ 5ನೇ ತರಗತಿಯ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ ಹಾಗೂ ವಿದ್ಯಾರ್ಥಿಯ ಆಧಾರ ಕಾರ್ಡ್ ಲಗುತ್ತಿಸುವುದು. ಅರ್ಹತಾ ಪರೀಕ್ಷೆ ಮೂಲಕ ನಿಯಮಾನುಸಾರ ಆಯ್ಕೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. ಆಸಕ್ತರು ಮೇ. 21 ಒಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಬೆಳಗಾವಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್.ಎಸ್.ಎಲ್.ಸಿ.ಪರೀಕ್ಷೆ: ಬಜಿನಗೌಡ ಶಾಲೆಯ ವಿದ್ಯಾರ್ಥಿಗಳ ಸಾಧನೆ



**ಬೆಳಗಾವಿ :** ಶಿಂದೊಳ್ಳೀಯ ದೇವೇಂದ್ರ ಜಿನಗೌಡ ಶಾಳೆಯ ವಿದ್ಯಾರ್ಥಿಗಳು 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಸಾಧನೆಯನ್ನು ತೋರಿದ್ದಾರೆ.

ಶಾಲೆಯ ಆದಿತಿ ರಮೇಶ ಹೆಗಡೆ ಶೇ. 97.92 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾಣ, ಮಾನವಿ ದಶರಥ ಪಾಲಕರ ಶೇ.96.16 ಅಂಕ ಪಡೆದು ದ್ವೀತಿಯ, ಹಾಗೂ ಇಂಪನಾ ದಿಲೀಪಕುಮಾರ ಕಾಳೆ ಶೇ.95.34 ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಅದರಂತೆ ಒಟ್ಟು 11 ವಿದ್ಯಾರ್ಥಿಗಳು ಶೇ. 90 ರಷ್ಟು ಅಂಕಗಳು ಹಾಗೂ 11 ವಿದ್ಯಾರ್ಥಿಗಳು ಶೆ.85 ರಷ್ಟು ಅಂಕಗಳನ್ನು ಗಳಿಸಿದ್ದಾರೆ.

50 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಶಾಲೆಗೆ ಕಿರ್ತೀ ತಂದಿದ್ದಾರೆ.

# ಪತ್ರಕರ್ತರಿಂದ ಮತದಾನ




**ಧಾರವಾಡ :** ರಾಜ್ಯದ ಎರಡನೇ ಹಂತದಲ್ಲಿ ಉತ್ತರ ಭಾಗದ 14 ಲೋಕಸಭೆ ಕ್ಷೇತ್ರಗಳಿಗೆ ದಿನಾಂಕ: 07–05–2024ರಂದು ಮತದಾನ ನಡೆಯಿತು. ಧಾರವಾಡ ಲೋಕಸಭಾ ಕ್ಷೇತ್ರದ ಮತದಾನದಲ್ಲಿ ಧಾರವಾಡ ನಗರದ ವಿವಿಧ ಮತಗಟ್ಟೆಗಳಲ್ಲಿ ಪತ್ರಕರ್ತರು ಮತದಾನ ಮಾಡಿದರು.

ಮತದಾನದಲ್ಲಿ ರಾಜು ಕಾಂಬಳೆ, ಪ್ರಕಾಶ ಕಾಂಬಳೆ, ರಾಜೀವ ಶಂಖೂ, ಮಲ್ಲಿಕಾರ್ಜುನ ಕಾಂಬಳೆ, ಅಶೋಕ ರಾಠೋಡ, ಡಾ. ರಾಜು ಜಯಪ್ಪಗೋಳ್, ಡಾ. ಜಯರಾಜ ಹುಣಸಿಮರದ, ಶಿವರಾಜ ಕಾಂಬಳೆ, ರಾಜಪ್ಪ ಮಾದರ ಮುಂತಾದವರು ಮತದಾನ ಮಾಡಿ, ಮತದಾನದ ಹಕ್ಕು ಚಲಾಯಿಸಿದರು.

# ಅತ್ಯುತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಜಿಲ್ಲಾ ಪೋಲಿಸ್ ಅಧೀಕ್ಷಕರಿಂದ ಅಭಿನಂದನೆ

**ಧಾರವಾಡ :** ರಾಜ್ಯ ಗೃಹ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿನ ಧಾರವಾಡ ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೋಲೀಸ್ ಮಕ್ಕಳ ವಸತಿ ಶಾಲೆಯಲ್ಲಿ ಎಪ್ರಿಲ್–2024 ರಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ಒಟ್ಟು 18 ವಿಧಾರ್ಥಿಗಳಲ್ಲಿ 6 ವಿಧ್ಯಾರ್ಥಿಗಳು ಡಿಸ್ಟಿಂಕ್ಷನ್, 12 ವಿಧ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಕು. ಯಶಸ್ ಜೆ.ಎಸ್. ಶೇ. 93.44 ಪ್ರಥಮ, ಕು. ಚೇತನ ಹದ್ದನ್ನವರ ಶೇ. 93.12 ದ್ವೀತಿಯ, ಕು. ರಾಹುಲ್ ಹೇರೂರು ಶೇ. 90.88 ತೃತೀಯ, ಕು. ಮಿಥುನ ಬಿ



ಶೇ. 89.6 ಚತುರ್ಥ ಸ್ಥಾನ ಪಡೆದಿದ್ದಾರೆ. ಈ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆದು ಶಾಲೆಗೆ ಮತ್ತು ಪೋಲೀಸ್ ಇಲಾಖೆಗೆ ಕೀರ್ತಿ ತಂದಿದ್ದಾರೆಂದು ಜಿಲ್ಲಾ ಪೋಲಿಸ್ ಅಧೀಕ್ಷಕರಿಂದ ಗೋಪಾಲ ಬ್ಯಾಕೋಡ್ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿರುತ್ತಾರೆ.

ರಾಜ್ಯ ಗೃಹ ಇಲಾಖೆಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಅಥವಾ ಸಿಬ್ಬಂದಿಯವರ ಮಕ್ಕಳು ಶ್ರೀ ಎನ್.ಎ. ಮುತ್ತಣ್ಣಸ್ಮಾರಕಪೋಲೀಸ್‌ಮಕ್ಕಳ ವಸತಿ ಶಾಲೆ, ಧಾರವಾಡ ಇಲ್ಲಿ 2024–25 ಸಾಲಿಗೆ ಪ್ರವೇಶ ಪಡೆಯಬಹುದಾಗಿದ್ದು ಪ್ರವೇಶಕ್ಕಾಗಿ ಪ್ರಾಚಾರ್ಯರು ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೋಲೀಸ್ ಮಕ್ಕಳ ವಸತಿ ಶಾಲೆ, ಧಾರವಾಡ ಇವರನ್ನು ಸಂಪರ್ಕಿಸಬಹುದಾಗಿದೆ. ಪ್ರವೇಶ ಅರ್ಜಿ ಸಲ್ಲಿಸಲು ಮೇ–20 ಕೊನೆಯ ದಿನವಾಗಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ಸಮಾಜದಲ್ಲಿನ ಮೌಢ್ಯತನ ಇನ್ನಷ್ಟು ಬದಲಾಗಬೇಕಿದೆ: ಸವದಿ



**ತೇರದಾಳ :** 12ನೇ ಶತಮಾನದಲ್ಲಿಯೇ ಬಸವಣ್ಣ ಸಾಮಾಜಿಕ ಕ್ರಾಂತಿ ಮಾಡಿದರು. ಆದರೆ ತಂತ್ರಜ್ಞಾನ ಯುಗದಲ್ಲಿಯೂ ನಾವು ಇನ್ನೂ ಬದಲಾವಣೆ ಆಗುತ್ತಿಲ್ಲ. ಸಮಾಜದಲ್ಲಿನ ಮೌಢ್ಯತನ ಇನ್ನಷ್ಟು ಬದಲಾಗಬೇಕಿದೆ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ಜಯಂತಿ ನಿಮಿತ್ತ ಹಮ್ಮಿಕೊಂಡಿದ್ದ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಬಸವಣ್ಣ ಜಾತಿಯನ್ನು ಹೋಗಲಾಡಿಸಲು ನಿರಂತರವಾಗಿ ಹೋರಾಟ ನಡೆಸಿದ. ಆದರೆ ಇಂದು ನಾವು ನಮ್ಮ ಸ್ವಾರ್ಥಕ್ಕಾಗಿ ಜಾತಿಯನ್ನು ಆಳುತ್ತಿರುವುದು ನಿಜಕ್ಕೂ ನೋವಿನ ಸಂಗತಿಯಾಗಿದೆ. ಬರೀ ಜಾತಿಯಿಂದ ಸಾಧನೆ ಮಾಡುತ್ತೇನೆ ಎಂದರೆ ಅದು ಎಂದಿಗೂ ಸಾಧ್ಯ ಇಲ್ಲ. ಎಲ್ಲರೂ ನಮ್ಮವರೂ ಎಂದಾಗ ಮಾತ್ರ ಈ ರಾಷ್ಟ್ರ ಸಮೃದ್ಧಿ ರಾಷ್ಟ್ರ ಆಗಲು ಸಾಧ್ಯ ಎಂದು ಹೇಳಿದರು. ಮಂಜುನಾಥ ಜಮಖಂಡಿಹಿರೇಮಠ ಬಸವೇಶ್ವರ ಪುತ್ಥಳಿಗೆ ಪೂಜೆ ಸಲ್ಲಿಸಿದರು. ಸಂತೋಷ ಜಮಖಂಡಿ, ಶಂಕರ ಕುಂಬಾರ, ಕೇದಾರಿ ಪಾಟೀಲ, ರಾಮಣ್ಣ ಹಿಡಕಲ್, ಸಂಗಮೇಶ ಕಾಲತಿಪ್ಪಿ, ಸಚಿನ ಕೊಡತೆ, ಮಹಾವೀರ ಕೊಕಟನೂರ, ಲಕ್ಕಪ್ಪ ಪಾಟೀಲ, ಪ್ರಸನ್ ಪಂಚಾಕ್ಷರಿ, ರಮೇಶ ಶೇಡಬಾಳ, ಪ್ರಭು ಹೂಗಾರ, ಶ್ರೀಶೈಲ ಮೋದಿ, ವಿಠ್ಠಲ ತಟ್ರಿ, ಮಹೇಶ ಹಂಜಿ, ಸುನೀಲ ತೆಳಗಿನಮನಿ, ಮುರಗೇಶ ಮಿರ್ಜಿ, ಲಕ್ಷ್ಮಣ ಮಾನಾಕಾಪುರ, ರಮೇಶ ಜಾಡಗೌಡರ, ಸುರೇಶ ಪರೀಟ, ನಿಂಗಪ್ಪ ಮಾಲಗಾಂವಿ ಇದ್ದರು.

# ಡಾ. ಪ್ರಭಾಕರ ಕೋರೆಯವರಿಗೆ 'ಕಾಯಕರತ್ನ' ಪ್ರಶಸ್ತಿ

**ಬೆಂಗಳೂರು :** ಇಲ್ಲಿಯ ಬಸವ ಸಮಿತಿಯು ಬಸವ ಭವನದಲ್ಲಿ ಆಯೋಜಿಸಿದ್ದ ಬಸವ ಜಯಂತಿಯ ಸಮಾರಂಭದಲ್ಲಿ ಡಾ. ಪ್ರಭಾಕರ ಕೋರೆಯವರಿಗೆ ಮೇ ಹತ್ತರಂದು 'ಕಾಯಕರತ್ನ' ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಡಾ. ಪ್ರಭಾಕರ ಕೋರೆಯವರು ಕಳೆದ ನಾಲ್ವತ್ತು ವರ್ಷಗಳಿಂದ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಸಹಕಾರಿ, ಕೃಷಿ, ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಅನುಪಮ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ಅವರಿಗೆ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಬೇಲಿಮಠದ ಪೂಜ್ಯರಾದ ಶಿವರುದ್ರ ಮಹಾಸ್ವಾಮೀಜಿ, ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ, ಅರಣ್ಯ ಸಚಿವರಾದ ಈಶ್ವರ ಖಂಡ್ರೆ, ಬಸವ ಸಮಿತಿ ಅಧ್ಯಕ್ಷರಾದ ಡಾ.ಅರವಿಂದ ಜತ್ತಿ ಡಾ.ಕೋರೆಯವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ.ಕೋರೆಯವರು 'ಇಂದು ವಿಶ್ವದಲ್ಲೆಡೆ ಸಂಭ್ರಮದಿಂದ ಬಸವಣ್ಣವರ



ಜಯಂತಿಯನ್ನು ಆಚರಿಸಲಾಗುತ್ತಿದೆ. ಬಸವಣ್ಣನವರು ಈ ವಿಶ್ವ ಕಂಡ ಅಪ್ರತಿಮ ದಾರ್ಶನಿಕರು. ಸಮಾಜ ಸುಧಾರಕರು. ಮಾತ್ರವಲ್ಲ ಹೊಸ ಸಮಾಜದ ನಿರ್ಮಾಪಕರು. ಎಂಟು ನೂರು ವರ್ಷಗಳ ಹಿಂದೆ ಅವರು ಕೈಗೊಂಡ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಶೈಕ್ಷಣಿಕ ಕ್ರಾಂತಿಯು ಇಂದಿಗೂ ಸಹ ಆದರ್ಶಪ್ರಾಯವಾಗಿದೆ. ಬಸವಣ್ಣನವರ ತತ್ವ ಸಾಹಿತ್ಯ ಎಲ್ಲರಿಗೂ ಎಲ್ಲಾ ಧರ್ಮದವರಿಗೂ ಬೇಕು. ನಿಜವಾದ ಅರ್ಥದಲ್ಲಿ ಬಸವಣ್ಣನವರು ನಮ್ಮ "ಸಾಂಸ್ಕೃತಿಕ ನಾಯಕ" ಆಗಿದ್ದಾರೆ. ನಮ್ಮ ಸಂಸ್ಕೃತಿ ಉಳಿದರೆ ನಾವು ಉಳಿಯುತ್ತೇವೆ. ಹೀಗಾಗಿ ಬಸವ ಜಯಂತಿಯ ಈ ದಿನ ನಮ್ಮ ಸಾಂಸ್ಕೃತಿಕ ನಾಯಕರಾದ ಬಸವಣ್ಣವರ ಬದುಕಿನ ಆದರ್ಶಗಳನ್ನು ಪಾಲಿಸುವ ಸಂಕಲ್ಪ ನಮ್ಮದಾಗಬೇಕು ಎಂದರು. "ಕಾಯಕವೇ ಕೈಲಾಸ" ಅಂತಹ ಕಾಯಕದ ಹೆಸರಿನ ಪ್ರಶಸ್ತಿಯನ್ನು ನೀಡಿರುವುದು ನನಗೆ ಹಾಗೂ ನಮ್ಮ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಗೆ ನೀಡಿದ ಗೌರವವೆಂದು ನಾನು ಭಾವಿಸುತ್ತೇನೆ. ಇಂದು ಶ್ರೀ ಅರವಿಂದ ಜತ್ತಿಯವರ ಸಾರಥ್ಯದಲ್ಲಿ ಬಸವ ಸಮಿತಿಯು ಜಗತ್ತಿನ ಹಲವಾರು ದೇಶಗಳಲ್ಲಿ ಬಸವಣ್ಣನವರ ಸಂದೇಶವನ್ನು ಮನೆ ಮನೆಗಳಿಗೆ ಮುಟ್ಟಿಸುವ ಮಹತ್ತರ ಕೆಲಸ ಮಾಡುತ್ತಿದೆ. ಅದಕ್ಕಾಗಿ ಅರವಿಂದ ಜತ್ತಿಯವರಿಗೆ ವೈಯಕ್ತಿಕವಾಗಿ ಹಾಗೂ ಈ ನಾಡಿನ ಜನತೆಯ ಪರವಾಗಿ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂತೆಯೆ ಬಸವಣ್ಣನವರ ದಿವ್ಯ ಸಂದೇಶವನ್ನು ಅರಿತು ಮುನ್ನಡೆದು ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸೋಣ ಎಂದು ಶುಭ ಕೋರಿದರು.

**ವರದಿ: ಡಾ ಜಯವೀರ ಎ.ಕೆ.**

# ವಿಶ್ವವಿದ್ಯಾಲಯದಲ್ಲಿ ಬಸವಣ್ಣನವರ ಜಯಂತಿ ಆಚರಣೆ



**ಜಮಖಂಡಿ :** ನಗರದ ಬಾಗಲಕೋಟ ವಿಶ್ವವಿದ್ಯಾಲಯದ ಸಭಾಭವನದಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಸಂಭ್ರಮದಿಂದ ಜಯಂತಿಯನ್ನು ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಡಾ.ಮಲ್ಲಿಕಾರ್ಜುನ ಮರಡಿ, ಉಪ-ಕುಲಸಚಿವ ಡಾ.ರಾಜೇಶ್ವರಿ ಮಠ, ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕ ಶ್ರವಣ ಚಲವಾದಿ ಸಹಿತ ಹಲವರು ಇದ್ದರು.

# ಸಚಿವ ಆರ್.ಬಿ. ತಿಮ್ಮಾಪೂರ ಅವರಿಂದ ಸಾಧಕನಿಗೆ ಸನ್ಮಾನ

## ಪ್ರಯತ್ನವಾದಿಗಳಿಗೆ ಯಶಸ್ಸು ಕಟ್ಟಿಟ್ಟ ಬುತ್ತಿ: ಸಚಿವ ಆರ್.ಬಿ.ತಿಮ್ಮಾಪೂರ

**ಮಹಾಲಿಂಗಪುರ :** ಯಾವುದೇ ಒಂದು ಕ್ಷೇತ್ರದಲ್ಲಿ ಯಶಸ್ಸು ಸಾಧಿಸಬೇಕಾದರೆ ಕಠಿಣ ಪರಿಶ್ರಮ, ನಿರಂತರ ಪ್ರಯತ್ನ, ತ್ಯಾಗ, ಸತತ ಅಧ್ಯಯನದಿಂದ ಮಾತ್ರ ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ ಎಂದು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಮತ್ತು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ಗುರುವಾರ ಸಂಜೆ ಸಮೀಪದ ಅಕ್ಕಿಮರಡಿ ಗ್ರಾಮದ ಸದಾಶಿವ ಕಂಬಳಿ ಅವರ ಮನೆಗೆ ಭೇಟಿ ನೀಡಿ ಆಯ್‌ಎಫ್‌ಎಸ್ ಪರೀಕ್ಷೆಯಲ್ಲಿ ದೇಶಕ್ಕೆ 42ನೇ ರ್ಯಾಂಕ್ ಪಡೆದ ಪಾಂಡುರಂಗ ಸದಾಶಿವ ಕಂಬಳಿ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು ಗ್ರಾಮೀಣ ಭಾಗದ ಒಬ್ಬ ರೈತನ ಮಗ ಯಾವುದೇ ಕೋಚಿಂಗ್ ಇಲ್ಲದೆ ಸತತ ಸ್ವಅಧ್ಯಯನ ಮಾಡಿ ಇಂದು ಯುಪಿಎಸ್‌ಸಿಯ



ಆಯ್‌ಎಫ್‌ಎಸ್ ಪರೀಕ್ಷೆಯಲ್ಲಿ ದೇಶಕ್ಕೆ 42 ರ್ಯಾಂಕ್ ಪಡೆದ ಮುಧೋಳ ಮತಕ್ಷೇತ್ರದ ಅಕ್ಕಿಮರಡಿಯ ಪಾಂಡುರಂಗ ಕಂಬಳಿ ಅವರ ಸಾಧನೆಯು ಯುವಕರಿಗೆ ಮಾದರಿಯಾಗಿದೆ ಎಂದರು.

ನಮ್ಮ ಮುಧೋಳ ಮತಕ್ಷೇತ್ರದ ಅಕ್ಕಿಮರಡಿಯ ಪಾಂಡುರಂಗ ಕಂಬಳಿ ಅವರು ಬುಧವಾರ ಆಯ್‌ಎಫ್‌ಎಸ್ ಪರೀಕ್ಷೆಯಲ್ಲಿ ದೇಶಕ್ಕೆ 42ನೇ ರ್ಯಾಂಕ್ ಪಡೆದರೆ, ಗುರುವಾರ ಪ್ರಕಟವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆದ ಮುಧೋಳ ತಾಲೂಕಿನ ಮೆಳ್ಳಿಗೇರಿ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿನಿ ಅಂಕಿತಾ ಬಸಪ್ಪ ಕೊಣ್ಣೂರ ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸುವದರೊಂದಿಗೆ ಈ ಇಬ್ಬರು ಗ್ರಾಮೀಣ ಪ್ರತಿಭೆಗಳು ನಮ್ಮ ಮುಧೋಳ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಇವರಿಬ್ಬರ ಭವಿಷ್ಯವು ಉಜ್ವಲವಾಗಿರಲಿ ಎಂದು ಶುಭ ಹಾರೈಸಿದರು.

ಅಭಿನಂದನೆಗಳ ಮಹಾಪೂರ : ಆಯ್‌ಎಫ್‌ಎಸ್ ಪರೀಕ್ಷೆಯ ಸಾಧಕ ಪಾಂಡುರಂಗ ಕಂಬಳಿಯವರಿಗೆ ಬುಧವಾರ ರಾತ್ರಿಯಿಂದ ಅವರ ಸಹಪಾಠಿಗಳು, ಅಕ್ಕಿಮರಡಿ ಸೈದಾಪೂರದ ಗ್ರಾಮಗಳ ಹಿರಿಯರು, ಕುಟುಂಬಸ್ಥರು ಸೇರಿದಂತೆ ಹಲವರು ಸನ್ಮಾನಿಸಿ-ಅಭಿನಂದನೆಗಳ ಮಹಾ ಪೂರವನ್ನೆ ಹರಿಸುತ್ತಿದ್ದಾರೆ.

ಆಯ್‌ಎಫ್‌ಎಸ್ ಪರೀಕ್ಷೆಯಲ್ಲಿ ಈ ಸಂದರ್ಭದಲ್ಲಿ ಸದಾಶಿವ ಕಂಬಳಿ, ಸುರೇಖಾ ಕಂಬಳಿ, ಲಕ್ಷ್ಮಣ ಕಂಬಳಿ, ಕಾಂಗ್ರೆಸ್ ಮುಖಂಡರಾದ ಯಶವಂತ ಚವ್ಹಾಣ, ಶಿವಾಜಿ ಚವ್ಹಾಣ, ಮಲ್ಲಪ್ಪ ಮಳಲಿ, ಉದಯ ಸಾರವಾಡ, ಮುದಕಣ್ಣ ಅಂಬಿಗೇರ, ಬಸನಗೌಡ ಪಾಟೀಲ, ರಾಜುಗೌಡ ಪಾಟೀಲ, ಲಕ್ಷ್ಮಣ ಮಾಳಗಿ, ಮಹಾದೇವ ಕೊಣ್ಣೂರ, ಭೀಮಶಿ ಕಂಬಳಿ, ಸಂತೋಷ ಜಗದಾಳ ಸೇರಿದಂತೆ ಹಲವರು ಇದ್ದರು.

# ಮತದಾನ ಕುರಿತು ಪ್ರಮುಖರ ಜೊತೆ ಸಮಾಲೋಚನೆ ನಡೆಸಿದ ಸಚಿವ ಪಾಟೀಲ

**ವಿಜಯಪುರ :** ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಪ್ರಚಾರ ಮತ್ತಿತರ ಕಾರ್ಯತಂತ್ರಗಳ ಕುರಿತು ಬ್ಯೂಸಿಯಾಗಿದ್ದ ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಈಗ ಮತದಾನ ಮುಕ್ತಾಯವಾಗಿರುವಹಿನ್ನೆಲೆಯಲ್ಲಿರಿಲ್ಯಾಕ್ಸ್ ಮೂಡಿನಲ್ಲಿದ್ದು, ಕಾಂಗ್ರೆಸ್ ಅಭ್ಯರ್ಥಿ ರಾಜು ಆಲಗೂರ ಅವರ ಗೆಲುವಿನ ಅಂತರ, ಅದ-ಕ್ಕೆ ಪೂರಕವಾಗಿರುವ ಅಂಶಗಳ ಕುರಿತು ಸಮಾಲೋಚನೆ ನಡೆಸಿದ್ದಾರೆ.

ಚುನಾವಣೆ ಸಂದರ್ಭದಲ್ಲಿ ಪ್ರತಿದಿನ ಬೆಳಿಗ್ಗೆಯಿಂದಲೇ ನಾನಾ ಗ್ರಾಮಗಳಿಗೆ ತೆರಳಿ ಮತದಾರರನ್ನು ಭೇಟಿ ಮಾಡಿದ ಸಚಿವರು ರಾಜು ಆಲಗೂರ ಪರ ಮತ ಯಾಚಿಸಿದ್ದರು. ಅಲ್ಲದೇ, ನಾನಾ ಸಭೆಗಳಲ್ಲಿ ಪಾಲ್ಗೊಂಡು ಕಾಂಗ್ರೆಸ್ ಸರಕಾರ ಜನರಿಗೆ ನೀಡಿರುವ ಗ್ಯಾರಂಟಿ ಯೋಜನೆಗಳು, ಅದರಿಂದ ಪ್ರತಿಯೊಂದು ಕುಟುಂಬಕ್ಕಾದ ಲಾಭಗಳು ಮತ್ತು ಬಿಜೆಪಿಯ ಪೊಳ್ಳು ಭರವಸೆಗಳಿಂದ ಜನಸಾಮಾನ್ಯರಿಗೆ ಉಂಟಾಗಿರುವ ಸಮಸ್ಯೆಗಳ ಕುರಿತು ಮನವರಿಕೆ ಮಾಡಿಕೊಟ್ಟಿದ್ದರು. ಅಲ್ಲದೇ, ಕೇಂದ್ರದಲ್ಲಿಕಾಂಗ್ರೆಸ್‌ನೇತೃತ್ವದಮೈತ್ರಿಕೂಟ ಅಧಿಕಾರಕ್ಕೆ ಬಂದರೆ ನೀಡಲಾಗುವ ಹೊಸ



ಪಂಚ ಗ್ಯಾರಂಟಿ ಯೋಜನೆಗಳ ಕುರಿತು ಜಾಗೃತಿ ಮೂಡಿಸಿದ್ದರು.

ಮತದಾನ ಮುಕ್ತಾಯ ಹಿನ್ನೆಯಲ್ಲಿ ಇಂದು ಬುಧವಾರ ನಗರದ ತಮ್ಮ ನಿವಾಸದಲ್ಲಿರುವ ಸಚಿವರು, ಭೇಟಿಗೆ ಆಗಮಿಸಿದ ಜಿಲ್ಲೆಯ ನಾನಾ ಭಾಗಗಳ ಮುಖಂಡರಿಂದ ಮತದಾನ ಪ್ರಮಾಣ ಮತ್ತು ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿನ ಅಂತರದ ಕುರಿತು ಮಾಹಿತಿ ಪಡೆದರು. ನಿಮ್ಮ ಊರಿನಲ್ಲಿ ಎಷ್ಟು ಮತದಾನವಾಗಿದೆ? ಯುವಕರು, ಮಹಿಳೆಯರು ಹಾಗೂ ಹಿರಿಯರ ಉತ್ಸಾಹ ಹೇಗಿತ್ತು? ಬೆಳಿಗ್ಗೆ ಮತದಾನದ ಪ್ರಮಾಣ ಹೇಗೆ ನಡೆಯಿತು ಸೇರಿದಂತೆ ಯಾವ್ಯಾವ ಮತಗಟ್ಟೆ ಮತ್ತು ಊರುಗಳಲ್ಲಿ ನಮಗೆ ಹೆಚ್ಚಿನ ಲೀಡ್ ಸಿಗಬಹುದು ಎಂಬುದರ ಕುರಿತು ಮಾಹಿತಿ ಸಂಗ್ರಹಿಸಿದರು. ಅಲ್ಲದೇ, ಹಲವಾರು ಮುಖಂಡರು ಮೊಬೈಲ್ ಮೂಲಕವು ಸಚಿವರಿಗೆ ಮತದಾನ ಮತ್ತಿತರ ವಿಷಯಗಳ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದಸಚಿವರು,ಬೇಸಿಗೆಯಲ್ಲಿಯೇ ಚುನಾವಣೆ ಬಂದಿದ್ದರಿಂದ ಮತದಾರರಿಗೆ ಬಿಸಿಲಿನ ಬೇಗೆಯಿಂದ ತೊಂದರೆ-ಯಾಗದಂತೆ ಪ್ರಚಾರ ಕಾರ್ಯಕ್ರಮ ನಿಗದಿ ಪಡಿಸಲಾಗಿತ್ತು. ಪ್ರತಿದಿನ ಬೆಳಿಗ್ಗೆ ಎರಡು ಮತ್ತು ಸಂಜೆ ಮೂರು ಕಡೆಗಳಲ್ಲಿ ಪ್ರಚಾರ ನಡೆಸಲಾಗಿತ್ತು.ಮತದಾನಚೆನ್ನಾಗಿನಡೆದಿದೆ. ನಮ್ಮ ಅಭ್ಯರ್ಥಿ ರಾಜು ಆಲಗೂರ ಅವರು ನಿಶ್ಚಿತವಾಗಿಯೂ ಗೆಲುವು ಸಾಧಿಸಲಿದ್ದಾರೆ. ಕನಿಷ್ಠ ಒಂದು ಲಕ್ಷ ಮತಗಳ ಅಂತರದಿಂದ ಗೆಲ್ಲಲಿದ್ದಾರೆ. ಎರಡನೇ ಹಂತದಲ್ಲಿ ಚುನಾವಣೆ ನಡೆದ ಒಟ್ಟು 14 ಕ್ಷೇತ್ರಗಳ ಪೈಕಿ ಕನಿಷ್ಠ 10 ರಿಂದ 11 ಸ್ಥಾನಗಳಲ್ಲಿ ಮತ್ತು ರಾಜ್ಯದಲ್ಲಿ 19 ರಿಂದ 20 ಕ್ಷೇತ್ರಗಳಲ್ಲಿ ನಾವು ಗೆಲುವು ಸಾಧಿಸಲಿದ್ದೇವೆ ಎಂದು ತಿಳಿಸಿದರು. ಕಳೆದ 10 ವರ್ಷಗಳಲ್ಲಿ ಮೋದಿ ಅವರು ನೀಡಿರುವ ಯಾವುದೇ ಭರವಸೆಗಳನ್ನು ಈಡೇರಿಸಿಲ್ಲ. ಜನರಿಗೆ ಅಚ್ಚೇ ದಿನ್ ಬಂದಿಲ್ಲ. ಯುವಕರಿಗೆ ಉದ್ಯೋಗ ಸಿಕ್ಕಿಲ್ಲ. ಬೆಲೆ ಏರಿಕೆ ನಿಯಂತ್ರಿಸಿಲ್ಲ. ಎಲೆಕ್ಟ್ರಾಲ್ ಬಾಂಡ್ ಹಗರಣಗಳು ಜನರಿಗೆ ಕೇಂದ್ರ ಸರಕಾರದ ಬಗ್ಗೆ ಅಸಮಾಧಾನ ಉಂಟು ಮಾಡಿದ್ದವು. ಈ ಬಾರಿ ಮೋದಿ ಹವಾ ಕೂಡ ಇರಲಿಲ್ಲ. ಬಿಜೆಪಿ ಒಡೆದ ಮನೆಯಾಗಿತ್ತು. ಆದರೆ ರಾಜ್ಯ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳಿಂದಾಗಿ 10 ಜನರಲ್ಲಿ ಏಳು ಜನ ಮಹಿಳೆಯರು ನಾವು ಗ್ಯಾರಂಟಿ ಪರ ಮತ ಚಲಾಯಿಸುತ್ತೇವೆ ಎಂದು ಹೇಳಿದ್ದರು. ಅಲ್ಲದೇ, ಎಲ್ಲ ಕಡೆ ಸಂಘಟಿತ ಪ್ರಯತ್ನದ ಫಲವಾಗಿ ಕಾಂಗ್ರೆಸ್ ಅಭ್ಯರ್ಥಿ . ರಾಜು ಆಲಗೂರ ಗೆಲುವು ಸಾಧಿಸಲಿದ್ದಾರೆ ಎಂದು ಸಚಿವ ಎಂ. ಬಿ. ಪಾಟೀಲ ತಿಳಿಸಿದರು.

# ಎಂಟು ತಿಂಗಳ ವೇತನ ಬಾಕಿ

## ಕಂಗಾಲಾದ 1,630 ಹೊರಗುತ್ತಿಗೆ ನೌಕರರು



**ಗಂಗಾವತಿ :** ಕಳೆದ ಎಂಟು ತಿಂಗಳಿಂದ ಜಿಲ್ಲೆಯ ಎಲ್ಲ ತಾಲ್ಲೂಕಿನ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ವಸತಿ ನಿಲಯದ ಹೊರಗುತ್ತಿಗೆ ನೌಕರರ ವೇತನ ಪಾವತಿ ಬಾಕಿ ಉಳಿದಿದ್ದು, 1,630ಕ್ಕೂ ಹೆಚ್ಚು ನೌಕರರು ವೇತನಕ್ಕಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಕೊಪ್ಪಳ, ಯಲಬುರ್ಗಾ, ಕುಷ್ಟಗಿ, ಗಂಗಾವತಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಒಳಪಡುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಒಟ್ಟು 52 ವಸತಿ ನಿಯಲಗಳು ಇದ್ದು ಇಲ್ಲಿನ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಹೊರಗುತ್ತಿಗೆ ನೌಕರರು ಹಗಲಿರುಳು ಶ್ರಮಿಸುತ್ತಿದ್ದರೂ ಸಮಯಕ್ಕೆ ಸರಿಯಾಗಿ ವೇತನ ಬರುತ್ತಿಲ್ಲ.

ಜಿಲ್ಲೆಯ ಮೆಟ್ರಿಕ್ ಪೂರ್ವ ಬಾಲಕ, ಬಾಲಕಿಯರ ವಸತಿ ನಿಲಯಗಳಲ್ಲಿ 207 ಅಡುಗೆಯವರು, 308 ಅಡುಗೆ ಸಹಾಯಕರು, 151 ಕಾವಲು ಸಿಬ್ಬಂದಿ, ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ವಸತಿ ನಿಲಯಗಳಲ್ಲಿ 370 ಅಡುಗೆಯವರು , 397 ಅಡುಗೆ ಸಹಾಯಕರು,137 ಕಾವಲು ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಎಷ್ಟು ತಿಂಗಳ ವೇತನ ಪಾವತಿಯಿಲ್ಲ!: ವಸತಿ ನಿಲಯಗಳಲ್ಲಿ ಕೆಲಸ ಮಾಡುವ ಹೊರಗುತ್ತಿಗೆ ನೌಕರರಿಗೆ ಪ್ರತಿ ತಿಂಗಳು ವೇತನ ಪಾವತಿ ಮಾಡಬೇಕೆಂಬ ನಿಯಮವಿದ್ದರೂ, ಸಂಬಂಧಪಟ್ಟ ಏಜೆನ್ಸಿ, ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂಬ ಆರೋಪವಿದೆ. ಸಂಬಳಕ್ಕಾಗಿ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿದರೆ, ಬಜೆಟ್ ಇಲ್ಲ ಎನ್ನುವ ಸಬೂಬು ಹೇಳುತ್ತಿದ್ದು, ಇದರ ಪರಿಣಾಮ 2023ರ ಸೆಪ್ಟೆಂಬರ್ ತಿಂಗಳಿಂದ 2024 ಏಪ್ರಿಲ್‌ವರೆಗೆ ವೇತನ ನೀಡಬೇಕಿದೆ.

ವೇತನಕ್ಕೆ ಅನುದಾನ ಎಷ್ಟು ಬರಬೇಕು?: ಜಿಎಸ್ಟಿ, ಇಎಸ್‌ಐ,ಪಿಎಫ್‌ಕಡಿತವಾಗಿಹೊರಗುತ್ತಿಗೆನೌಕರರಿಗೆ ತಿಂಗಳ ವೇತನ ರೂ. 10–12 ಸಾವಿರ ಮಾತ್ರ ಸಿಗುತ್ತಿದೆ.ಇದೀಗ ವೇತನ ವಿಳಂಬವಾಗಿದ್ದು, ಈವರೆಗೆ ಯೋಜನೆಯ 61ನೇ ಹೆಡ್‌ನಲ್ಲಿ ರೂ. 1.09 ಕೋಟಿ, 29ನೇ ಹೆಡ್ ರೂ. 1.37ಕೋಟಿ, 30ನೇ ಹೆಡ್ ರೂ. 14.02 ಲಕ್ಷ, 32ನೇ ಹೆಡ್‌ನಡಿ ರೂ. 4.64 ಲಕ್ಷ ಸೇರಿ ರೂ. 2.65 ಕೋಟಿ ಅನುದಾನ ವೇತನ ಪಾವತಿ ಆಗಬೇಕಿದೆ.'ನಿಯಮಿತವಾಗಿ ವೇತನ ಬಾರದ ಕಾರಣ ಸಾಲ ಮಾಡಿ ಮನೆ ನಿರ್ವಹಣೆ ಮಾಡಬೇಕಾದ ದುಸ್ಥಿತಿ ಎದುರಾಗಿದೆ. ವೇತನದ ಅನುದಾನ ಬಿಡುಗಡೆ ಮಾಡಲು ಅಧಿಕಾರಿಗಳನ್ನು ಕೇಳಿದರೆ, ಬಜೆಟ್ ಮತ್ತು ಏಜೆನ್ಸಿ ನೆಪ ಹೇಳಿ ತಪ್ಪಿಸಿಕೊಳ್ಳುತ್ತಾರೆ. ಸಮಯಕ್ಕೆ ವೇತನವೇ ಹಾಕುವುದಿಲ್ಲ'ಎಂದು ಮುಸಲಾಪುರ ಮೆಟ್ರಿಕ್ ಪೂರ್ವ ವಸತಿ ನಿಲಯದ ಕಾವಲುಗಾರ ದವಲಸಾಬ್ ಬೇಸರ ವ್ಯಕ್ತಪಡಿಸಿದರು.

# ಜಿಲ್ಲಾಡಳಿತದ ವತಿಯಿಂದ ಜಗಜ್ಯೋತಿ ಬಸವೇಶ್ವರ, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ ಆಚರಣೆ

**ವಿಜಯಪುರ :** ವಿಜಯಪುರ ಜಿಲ್ಲಾಡಳಿತದ ವತಿಯಿಂದ ಮೇ.10ರ ಶುಕ್ರವಾರದಂದು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಗಜ್ಯೋತಿ ಬಸವೇಶ್ವರ ಹಾಗೂ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು.

ಲೋಕಸಭಾ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಜಿಲ್ಲಾಡಳಿತದ ವತಿಯಿಂದ ಇಂದು ಹಮ್ಮಿಕೊಂಡಜಯಂತಿಕಾರ್ಯಕ್ರಮವನ್ನು ಅತ್ಯಂತ ಸರಳವಾಗಿ ಶಿಷ್ಟಾಚಾರದಂತೆ ಆಚರಿಸಲಾಯಿತು. ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪಂಚಾಯತ್



ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ತಹಶೀಲ್ದಾರರಾದ ಶ್ರೀಮತಿ ಕವಿತಾ ಅವರು ಬಸವಣ್ಣನವರ ಹಾಗೂ ಶಿವಶರಣೆ ಹೆಮರೆಡ್ಡಿ ಮಲ್ಲಮ್ಮ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ ಗೌರವ ಸಲ್ಲಿಸಿದರು.

ಇದಕ್ಕೂ ಮೊದಲು ನಗರದ ಬಸವೇಶ್ವರ ವೃತ್ತದಲ್ಲಿರುವ ಬಸವೇಶ್ವರ ಪುತ್ಥಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷಿಕೇಶಸೊನಾವಣೆಮಾಲಾರ್ಪಣೆಮಾಡಿ ಗೌರವ ಸಲ್ಲಿಸಿದರು.

ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಸಮಾಜದ ಮುಖಂಡರುಗಳಾದ ಶರಣು ಸಬರದ, ಭೀಮರಾಯ ಜಿಗಜಿನ್ನಿ, ಹಣಮಂತ ಮಾಚಪ್ಪನವರ, ಸುರೇಶ ದೇಸಾಯಿ,ಕೆ.ಕೆ.ಬನ್ನೆಟ್ಟಿಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕೊಪ್ಪಳ: ಹತ್ಯೆಗೀಡಾದ ಆಕಾಂಕ್ಷಾಗೆ ಎಸ್‌ಎಸ್‌ಎಲ್‌ಸಿಯಲ್ಲಿ 369 ಅಂಕ

**ಕೊಪ್ಪಳ :** ಕಳೆದ ತಿಂಗಳು ಗದಗದಲ್ಲಿ ಪೋಷಕರ ಜೊತೆ ಹತ್ಯೆಗೀಡಾದ ಇಲ್ಲಿನ ಆಕಾಂಕ್ಷಾಗೆ ಎಸ್‌ಎಸ್‌ಎಲ್‌ಸಿಯಲ್ಲಿ 369 ಅಂಕಗಳು ಲಭಿಸಿವೆ. ಕುಟುಂಬದ ವೈಷಮ್ಯಕ್ಕೆ ನಡೆದಿದ್ದ ಕೃತ್ಯದಲ್ಲಿ ಕೊಪ್ಪಳದ ಮೂವರು ಸೇರಿ ನಾಲ್ಕು ಜನರ ಕೊಲೆಯಾಗಿತ್ತು. ಅದರಲ್ಲಿ ಆಕಾಂಕ್ಷಾ ಹಾಗೂ ಅವರ ಪೋಷಕರೂ ಸೇರಿದ್ದರು. ಇಲ್ಲಿನ ಪಯೋನಿಯರ್ ಶಾಲೆಯಲ್ಲಿ ಓದುತ್ತಿದ್ದ ಆ ವಿದ್ಯಾರ್ಥಿನಿ ಉತ್ತಮ ಅಂಕಗಳನ್ನು ಪಡೆದಿದ್ದಾಳೆ. ಗದಗ ಬೆಟಗೇರಿ ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಅವರ ಮನೆಯಲ್ಲೇ ಅವರ ನಡೆದ ಹತ್ಯೆಯಲ್ಲಿ ಆಕಾಂಕ್ಷಾ ಅವರ ಪೋಷಕರ ಸಹಿತ ನಾಲ್ವರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State